ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಸಂಪುಟ 4 ಸಂಚಿಕೆ 6 ನವೆಂಬರ್ 2011

India ECHOES
ONE WORLD ONE HUMANITY

ಶ್ರೀ ರಾಮಚಂದ್ರ ಮಿಷನ್





## ಗುರುಗಳ ಉತ್ತರಾಧಿಕಾರಿಯ ನೇಮಕ

### ಕೊಲ್ಕತ್ತಾ 3ನೇ ಅಕ್ಟೋಬರ್ 2011

### ಗುರುಗಳು ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಕೆಲ ಆಹ್ವಾನಿತರನ್ನು ಉದ್ದೇಶಿಸಿ ಮಾತನಾಡಿದರು.

ನಾನು ಹೇಳಿದಂತೆ ,ಇಂದು ನಾನು ನನ್ನ ಉತ್ತರಾಧಿಕಾರಿಯನ್ನು ನೇಮಿಸಲು, ನೀವೆಲ್ಲರೂ ಅನುಮೋದಿಸುವಂತೆ ನೇಮಿಸಲು ಮತ್ತು ನಾಮಕರಣ ಮಾಡಲು ಬಯಸುತ್ತೇನೆ. ಏಕೆಂದರೆ ನಾನೀಗ ನನ್ನ ಎಂಭತ್ತೈದನೆಯ ವರ್ಷದಲ್ಲಿದ್ದು ಇದು ಸರಿಯಾದ ಸಮಯುವಾಗಿದೆ. ಇದು ಬಾಬೂಜಿ ಮಹಾರಾಜರಿಂದ ಆಶೀರ್ವದಿಸಲ್ಪಟ್ಟಿದ್ದು ಮತ್ತು ಅವರ ಅಪ್ಪಣೆಯಂತೆ ನಾನು ಈ ನೇಮಕವನ್ನು ಲಿಖಿತ ರೂಪದಲ್ಲಿ, ಸರಿಯಾದ ಸಮಯ ಬಂದಾಗ ಉಪಯೋಗಿಸುವಂತಹ ಒಂದು ರಹಸ್ಯ ದಾಖಲೆಯನ್ನಾಗಿರಿಸುವುದಲ್ಲದೆ ಅದನ್ನು ಸಾರ್ವಜನಿಕವಾಗಿ ಘೋಷಿಸುತ್ತಿರುವುದರಿಂದ ಅವರ ಸುತ್ತಲಿನ ಎಲ್ಲರೂ ನಿಧಾನವಾಗಿ ಇವರೇ ಮುಂದಿನ ಉತ್ತರಾಧಿಕಾರಿ ಎಂಬ ಅಂಶವನ್ನು ಮೈಗೂಡಿಸಿಕೊಳ್ಳುತ್ತಾರೆ. ಇದರಿಂದ ಸಮಯ ಬಂದಾಗ ಥಟ್ಟನೆ ಬದಲಾವಣೆ ಆಗದು, ನನ್ನ ಪ್ರಕಾರ ಇದು ವಿವೇಕ. ಆದರೆ ನಾನಾಗಲೇ ನಾನು ಲಿಖಿತ ದಾಖಲೆಯನ್ನು ಸಹ ಹೊಂದಿದ್ದು ಅಮೇಲೆ ಯಾರನ್ನಾದರೂ ಅದನ್ನು ಓದಲೆಂದು ಕೇಳಿಕೊಳ್ಳುತ್ತೇನೆ.

ಯಾವ ವ್ಯಕ್ತಿಯ ಹೆಗಲ ಮೇಲೆ ಆಧ್ಯಾತ್ಮಿಕ ಜವಾಬ್ದಾರಿಯ ಹೊರೆ ಬೀಳುವುದೋ ಆತನಿಗೆ ಅಗಾಧವಾದ ಜ್ಞಾನ, ಅಗಾಧ ಸಹನೆ, ಅಗಾಧವಾದ ಪ್ರೇಮ ಮತ್ತು ಎಲ್ಲದಕ್ಕಿಂತಲೂ ಮಿಗಿಲಾಗಿ ಏನನ್ನೂ ಮಾಡುವ ಮೊದಲು ಅಪರಿಮಿತ ಚಿಂತನೆ ಅಗತ್ಯವಾಗಿದೆ. ಸಾಮಾನ್ಯವಾಗಿ ನಮಗೆಲ್ಲಾ ಹೇಳಿಕೊಟ್ಟಿದ್ದಾರೆ, "ನೆಗೆಯುವ ಮುನ್ನ ನೋಡು", ಅಥವಾ "ಏನನ್ನು ಮಾಡಬೇಕಾದರೂ ಎರಡು ಬಾರಿ ಯೋಚಿಸು" ಎಂದು. ಆದರೆ ಸಹಜಮಾರ್ಗದಲ್ಲಿ ನಾವು ಎರಡೇ ಸಾರಿ ಅಲ್ಲ ಅನೇಕ ಬಾರಿ ಯೋಚಿಸಬೇಕಾಗುತ್ತದೆ ಮತ್ತು ಜಾಗರೂಕತೆಯಿಂದಿರಬೇಕಾಗುತ್ತದೆ. ನಾವು ನಮಗೆ ವಹಿಸಲಾಗಿರುವ ಸಾರ್ವಜನಿಕ ಹಣವನ್ನು ಸಾರ್ವಜನಿಕರ ಒಳಿತಿಗಾಗಿಯೇ ವಿನಿಯೋಗಿಸುವಾಗ ಅತ್ಯಧಿಕ ಎಚ್ಚರಿಕೆಯಿಂದಿರಬೇಕಾಗುತ್ತದೆ. ನಾನು ನಿರ್ದೇಶಿಸುತ್ತಿರುವ ವ್ಯಕ್ತಿಗೆ ಈ ಎಲ್ಲಾ ಗುಣಗಳು ಇಲ್ಲದಿದ್ದಲ್ಲಿ ಅವನ್ನು ಆತ ಬೆಳೆಸಿಕೊಳ್ಳಬೇಕಾಗುತ್ತದೆ. ಆಂತರಿಕವಾಗಿ ಸದೃಢನೂ, ಬಾಹ್ಯವಾಗಿ ಸ್ನೇಹಪರನೂ, ಭ್ರಾತೃತ್ವದಿಂದಲೂ ಇರಬೇಕು ಮತ್ತು ಬಾಬೂಜಿಯವರು ನನಗೆ ನೀಡಿದ ಹಾಗೂ ನಾನು ನನ್ನ ಜೀವನವಿಡೀ ಅನುಸರಿಸಿದ ನೀತಿಯನ್ನು ಅನುಸರಿಸಬೇಕು – ಯಾರನ್ನೂ ನಂಬಬೇಡ ಮತ್ತು ಯಾರನ್ನೂ ನಂಬದಿರಬೇಡ. ಯಾರನ್ನೇ ಆಗಲಿ ಅವರು ಯಾವ ಕೆಲಸಕ್ಕಾಗಿ ಆಯ್ಕೆಯಾಗಿದ್ದಾರೋ ಆ ಕೆಲಸಗಳ ಆಧಾರದ ಮೇಲೆ ನಿರ್ಣಯಿಸಬೇಕು. ಅವರು ಮಾಡಿರುವ ಕೆಲಸದ ಫಲಿತಾಂಶದ ಆಧಾರದ ಮೇಲೆ ಅವರನ್ನು ಆಯ್ಕೆ ಮಾಡುವುದು ಅಥವಾ ನಿವೃತ್ತಿಗೊಳಿಸುವುದು ಆಗಬೇಕು. ಯಾವುದೇ ಪೂರ್ವಾಗ್ರಹಗಳಿರಬಾರದು. ಜನಾಂಗ , ಜಾತಿ, ಧರ್ಮ, ಲಿಂಗ, ವರ್ಗ, ಭಾಷೆ ಇಂತಹ ಯಾವುದೇ ಪೂರ್ವಾಗ್ರಹಗಳಿರಬಾರದು.

ಇದನ್ನು, ಯಾರು ಈ ಹೊರೆಗೆ ಹೆಗಲು ನೀಡಲು ಹೊರಡುತ್ತಾರೊ ಅವರು ಕಟ್ಟುನಿಟ್ಟಾಗಿ ಅರ್ಥಮಾಡಿಕೊಳ್ಳಬೇಕು. ಗುರುಗಳು ಅವರಿಗೆ ದೀರ್ಘಾಯುಷ್ಯ, ಆರೋಗ್ಯ, ಸಾಮರ್ಥ್ಯ ಮತ್ತು ಧೈರ್ಯವನ್ನು ನೀಡಲಿ. ಏಕೆಂದರೆ ನಾನು ಮಿಷನ್‌ನ್ನು ಪಡೆದುಕೊಂಡಾಗ ಅದು ಚಿಕ್ಕದಾಗಿತ್ತು. ನನ್ನ ನಂತರ ನನ್ನಿಂದ ಮಿಷನ್‌ನ್ನು ಪಡೆದುಕೊಳ್ಳುವವರಿಗೆ ಪ್ರಪಂಚದಾದ್ಯಂತ ಬೆಳೆದಿರುವ ದೊಡ್ಡದಾದ ಸಂಸ್ಥೆಯನ್ನು ನಿಭಾಯಿಸಬೇಕಾಗುತ್ತದೆ. ಇದು ಬೆಳೆಯುತ್ತಲೇ ಇದ್ದು ಬಾಬೂಜಿಯವರ ಸಂದೇಶದ ಪ್ರಕಾರ ಇನ್ನೂ ಬೆಳೆಯುತ್ತದೆ. ಇದು ಬೆಳವಣಿಗೆಯ ಘಟ್ಟ. ಇದು ಎಷ್ಟು ದೀರ್ಘ ಕಾಲ ಇರುವುದೋ ನನಗೆ ಗೊತ್ತಿಲ್ಲ. ಅದು ದೈವ ಚಿಂತನೆಯನ್ನು ಅವಲಂಬಿಸಿದೆ.

ನಾನು ನನ್ನ ಉತ್ತರಾಧಿಕಾರಿಯೆಂದು ನೇಮಿಸುತ್ತಿರುವ ವ್ಯಕ್ತಿಯು ಶ್ರೀ ಕಮಲೇಶ್ ಪಟೇಲ್.

... ವಿಶ್ವದಾದ್ಯಂತ ಇರುವ ಎಲ್ಲಾ ಅಭ್ಯಾಸಿಗಳು, ನಾಮ ನಿರ್ದೇಶಿತ ಉತ್ತರಾಧಿಕಾರಿಗೆ ಯಾವುದೇ ಪೂರ್ವಾಗ್ರಹವಿಲ್ಲದೆ ತಮ್ಮ ಸಂಪೂರ್ಣ ಸಹಕಾರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರ ಕೆಲಸಗಳಿಂದ ಅವರನ್ನು ವಿಮರ್ಶಿಸಬೇಕು ಹೊರತು ಅವರು ಏನಾಗಿದ್ದರೋ ಅಥವಾ ಅವರು ಏನಾಗಬೇಕೆಂದು ನೀವು ಬಯಸುತ್ತೀರೋ ಅದರಿಂದಲ್ಲ. ಅವರನ್ನು ಅವರು ಏನಾಗಿದ್ದಾರೋ, ಏನಾಗುತ್ತಾರೋ, ಏನು ಮಾಡುತ್ತಾರೋ ಅದರಿಂದ ನಿರ್ಧರಿಸಿ.ಇದು ಮಿಷನ್ನಿನ ಆರೋಗ್ಯದ ದೃಷ್ಟಿಯಿಂದಲೂ ಹಾಗು ಭವಿಷ್ಯದ ಬೆಳವಣಿಗೆಯ ದೃಷ್ಟಿಯಿಂದಲೂ ಬಹಳ ಅವಶ್ಯವಾಗಿದೆ. ಇದಕ್ಕೆ ಪ್ರತಿಯಾಗಿ ಅವರು ಮಿಷನ್ನಿನ ಮೂಲಕ ತಮಗೆ ನೀಡಬಹುದಾದ ಸೇವೆಯನ್ನು ನೀಡಲು ನಿಮ್ಮೆಲ್ಲರ ಸಂಪೂರ್ಣ ಹೃದಯಪೂರ್ವಕ ಸಹಕಾರ ಸಿಗಲೆಂದು ನಿಮ್ಮೆಲ್ಲರನ್ನು ನಾನು ಕೋರಿಕೊಳ್ಳುತ್ತೇನೆ.

ನಿಮಗೆಲ್ಲರಿಗೂ ಆಶೀರ್ವಾದ ದೊರೆಯಲಿ.

ಸಂಪುಟ 4 ಸಂಚಿಕೆ 5 ನವೆಂಬರ್ 2011

ಶ್ರೀ ರಾಮಚಂದ್ರ ಮಿಷನ್

ಎಖೋಸ್ ಇಂಡಿಯ ವಾರ್ತಾಪತ್ರ

# ಗುರುಗಳ ಪ್ರವಾಸ

## ದೆಹಲಿ 16 – 18 ಆಗಸ್ಟ್ 2011

ಗುರುಗಳು ಚೆನ್ನೈನಿಂದ ವಾಯುಮಾರ್ಗವಾಗಿ ದೆಹಲಿಗೆ ಆಗಸ್ಟ್ 16 ರಂದು ದೆಹಲಿಗೆ ಬಂದದ್ದು ಅಭ್ಯಾಸಿಗಳಿಗೆ ಸಂತಸ ತಂದಿತು. ವಿಮಾನನಿಲ್ದಾಣದಲ್ಲಿ ಸುಮಾರು ನೂರು ಅಭ್ಯಾಸಿಗಳು ಗುರುಗಳನ್ನು ಸ್ವಾಗತಿಸಿದರು. ಗುರುಗಳು ಉಲ್ಲಸಿತರಾಗಿದ್ದು ಪ್ರಯಾಣ ಹೇಗಿತ್ತೆಂದು ವಿಚಾರಿಸಿದಾಗ ಅವರು ಪ್ರಯಾಣವನ್ನು ಸಂಸ್ಕಾರಗಳಂತೆ ಸಹಿಸಿಕೊಳ್ಳಬೇಕಾಗುತ್ತದೆ ಎಂದು ನಗುತ್ತಾ ಉತ್ತರಿಸಿದರು. ಲಘು ಪ್ರಯಾಣದ ನಂತರ ಅವರು ಅಭ್ಯಾಸಿ ಸೋದರರೊಬ್ಬರ ಮನೆಗೆ ತೆರಳಿ ಅಲ್ಲಿ ಸೇರಿದ್ದ ಅಭ್ಯಾಸಿಗಳಿಗಾಗಿ ಸತ್ಸಂಗ ನಡೆಸಿಕೊಟ್ಟರು. ಸಾಯಂಕಾಲವಿಡೀ ಅವರು ಎಂದಿನಂತೆ ಉಲ್ಲಾಸದಿಂದಿದ್ದರು. ರಾತ್ರಿಯ ಭೋಜನದ ನಂತರ ಅವರಿಗೆ ಬಾಬೂಜಿಯವರ ಮೊಮ್ಮಗಳಿಗೆ ಮಗುವಾದ ಸಮಾಚಾರ ತಿಳಿದೊಡನೆಯೇ ಅವರು ತಮಗೆ ವಿಮಾನದಲ್ಲಿಯೇ ಹಾಗನಿಸಿತ್ತು ಹಾಗೂ ತಮ್ಮ ಪ್ರೀತಿಪಾತ್ರ ಗುರುಗಳ ಮರಿ ಮೊಮ್ಮಗಳಿಗೆ 'ದೇವಯಾನಿ' ಎಂಬ ಹೆಸರಿಡಬೇಕೆಂದು ಯೋಚಿಸಿದ್ದೆ ಎಂದರು.

ಮರುದಿನ ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟು ದೆಹಲಿ ಆಶ್ರಮದ ಜಾಗವೊಂದರ ಮೊದಲ ಹಂತದ ನೋಂದಣಿಗಾಗಿ ತೆರಳಿದರು. ನಂತರ ಅವರು ನೆರೆದಿದ್ದ ಎಲ್ಲರಿಗೂ ಪ್ರೀತಿಯಿಂದ ಮಾತನಾಡಿಸಿ ಪ್ರಸಾದವನ್ನು ವಿತರಿಸಿದರು. ಸಂಜೆ ಸುಮಾರು 6.30ಕ್ಕೆ ಅವರು ಸತ್ಸಂಗವನ್ನು ನಡೆಸಿಕೊಟ್ಟರು. ಭೋಜನಾನಂತರ ಎಂದಿನಂತೆ ತಮ್ಮ ವಾಕ್ಚಾತುರ್ಯದಿಂದ ಎಲ್ಲರನ್ನು ನಗಿಸುತ್ತಾ ತಾವು ಟಿಟಿಕೆಯಲ್ಲಿ ಸೇವಾನಿರತರಾಗಿದ್ದಾಗಿನ ಕಾಲದ ಕುರಿತು ಮಾತನಾಡಿದರು. ಗುರುಗಳು ಪ್ರೇಮದಂತೆ ಪ್ರಾಮಾಣಿಕತೆಯೂ ಸಹ ಏಕಮುಖ ಮಾರ್ಗ ಹಾಗೂ ಪ್ರಾಮಾಣಿಕತೆಯ ಪ್ರತಿಫಲವೆಂದರೆ ಪ್ರಾಮಾಣಿಕರಾಗಿರುವ ಸಾಮರ್ಥ್ಯ ಹೊಂದಿರುವುದು ಎಂದರು.

ಆಗಸ್ಟ್ 18ರಂದು ಗುರುಗಳು ಕೆಲವು ಅಭ್ಯಾಸಿಗಳೊಡನೆ ಸಂವಾದಿಸಿ ನಂತರ ಹೈದರಾಬಾದ್‌ಗೆ ಹೊರಟರು.

## ಹೈದರಾಬಾದ್ 18 – 23 ಆಗಸ್ಟ್


ತಲುಪಿದೊಡನೆಯೇ ಗುರುಗಳು ಕಾನ್ಹಾ ಶಾಂತಿವನಂ ಯೋಜನೆಯ ನೋಂದಣಿಯ ಕಾರ್ಯನಿರ್ವಹಿಸಲು ಗಚ್ಚಿಬೌಲಿಗೆ ತೆರಳಿದರು. ಅವರು ತಮಗಿಂತ ನಾಲ್ಕು ವರ್ಷ ಹಿರಿಯರಾದ ಹಾಗೂ ತಾವು ಪ್ರಶಿಕ್ಷಕರಾದ ನಂತರ ಪರಿಚಯಿಸಿದ ಮೊದಲ ವ್ಯಕ್ತಿ ಸೋ. ಶ್ರೀನಿವಾಸರಾವ್ ಕಾಶಂಪೂರ್‌ಕರ್‌ರವರನ್ನು ನೋಡಿ ಸಂತಸಿತರಾದರು. ಅವರೊಂದಿಗಿನ ಗುರುಗಳ ಸ್ಪಂದನವು ಬಲು ಕೋಮಲವಾಗಿತ್ತು. ರಾತ್ರಿ ಭೋಜನದ ನಂತರ ಮಕ್ಕಳೆಲ್ಲ ಊಟದ ಮೇಜನ್ನು ಸುತ್ತುವರೆದು ತಮ್ಮ ಪ್ರೀತಿಯ 'ಮಾಸ್ಟರ್ ತಾತ' ಜೊತೆ ನಗೆಹನಿಗಳನ್ನು ಹಂಚಿಕೊಂಡರು. ಗುರುಗಳೂ ಸಹ ಕೆಲವು ನಗೆಹನಿಗಳೊಂದಿಗೆ ಸ್ಪಂದಿಸಿದರು.

ಆಗಸ್ಟ್ 19ರಂದು ಮುಂಜಾನೆಯ ಸತ್ಸಂಗದ ನಂತರ ಗುರುಗಳು ಕಾನ್ಹಾ ಯೋಜನೆಯ ತಂಡವನ್ನು ಭೇಟಿ ಮಾಡಿ ಕಾಗದಪತ್ರಗಳನ್ನು ಪರಿಶೀಲಿಸಿದರು. ಉಪಹಾರದ ನಂತರ ನೆರೆದ ಅಭ್ಯಾಸಿಗಳೊಡನೆ ಸಂಭಾಷಿಸುತ್ತಾ



ಸೋದರಿಯೊಬ್ಬರಿಗೆ ಹಿಂದಿನ ದಿನ ಎಲ್ಲಿದ್ದರೆಂದು ಕೇಳಿದಾಗ ಅವರು ತಮ್ಮ ಮನಸ್ಸು ಸರಿಯಿರಲಿಲ್ಲವೆಂದು ಉತ್ತರಿಸಿದರು. ಗುರುಗಳು ಅವರೇನಾದರೂ ತಮ್ಮ ಮೇಲೆ ಕೋಪಿಸಿಕೊಂಡಿದ್ದರೇ ಎಂದು ಕೇಳಿದರು ಹಾಗೂ ಬಾಬೂಜಿಯವರು ತಮಗೆ ಹೇಳಿದ್ದರು, ನೀವು ನಿಮ್ಮ ಪತಿ, ಪತ್ನಿ, ಮಗ ಅಥವಾ ಮಗಳ ಮೇಲೆ ಕೋಪಿಸಿಕೊಳ್ಳಲಾಗದು ಆದರೆ ಗುರುಗಳ ಮೇಲೆ ಕೋಪ ತೋರಿಸಬಹುದು ಏಕೆಂದರೆ ಆ ಕೋಪದಿಂದ ಮಾತ್ರವೇ ಪ್ರತಿಘಾತವಿರುವುದಿಲ್ಲ.

ಆಗಸ್ಟ್ 20ರಂದು ಉಪಾಹಾರದ ನಂತರ ಗುರುಗಳು ಕಾನ್ಹಾ ಶಾಂತಿವನಂಗೆ ತೆರಳಿದರು. ಅಲ್ಲಿ ಭೂಮಿಯನ್ನು ಸ್ವಚ್ಛಗೊಳಿಸಿ, ಬೇಲಿ ಹಾಕಿ, ಪಪ್ಪಾಯಿ, ಮೆಕ್ಕೆಜೋಳ ಮತ್ತು ಭತ್ತವನ್ನು ಬೆಳೆಯಲಾಗುತ್ತಿದೆ. ಒಂದು ಮರದ ಸುತ್ತ ಪುಟ್ಟ ಕುಟೀರವನ್ನು ನಿರ್ಮಿಸಲಾಗಿದೆ. ಗುರುಗಳು ಹೊರಕುಳಿತು ಜಾಗದ ನಕ್ಷೆಯನ್ನು ಪರಿಶೀಲಿಸಿದರು. ಗುರುಗಳು ಅಲ್ಲಿ ಮೊದಲ ಸತ್ಸಂಗವನ್ನು ನಡೆಸಿಕೊಟ್ಟು ಇನ್ನು ಮುಂದೆ ಅಲ್ಲಿ ನಿಯಮಿತವಾಗಿ ಭಾನುವಾರದ ಸತ್ಸಂಗಗಳನ್ನು ನಡೆಸಲು ಅನುಮತಿ ನೀಡಿದರು. ಅವರು ಸ್ಥಳದಲ್ಲೆಲ್ಲ ಓಡಾಡಿ ಉತ್ತಮ ನಿರ್ವಹಣೆಯನ್ನು ಶ್ಲಾಘಿಸಿದರು. ಅವರು ನಂತರ ಸೋ. ಮಧು ಕೋತಪಲ್ಲಿಯವರ ಸ್ವಗೃಹಕ್ಕೆ ಭೋಜನ ಮತ್ತು ವಿಶ್ರಾಂತಿಗಾಗಿ ತೆರಳಿದರು.



ಗುರುಗಳು ಆಶ್ರಮವನ್ನು ನೋಡಲು ತಳಮಳಗೊಂಡಿದ್ದು ಅಪರಾಹ್ನ 3.30ಕ್ಕೆ ಹೊರಟು ಸಂಜೆ 6ಘಂಟೆಗೆ ವಲಯಾಶ್ರಮವನ್ನು ತಲುಪಿದಾಗ ಸುಮಾರು 4000 ಅಭ್ಯಾಸಿಗಳಿಂದ ಸ್ವಾಗತ ಪಡೆದರು. ಒಬ್ಬರು ಶಿಸ್ತಿನ ಬಗ್ಗೆ ಮಾತನಾಡಿದಾಗ ಗುರುಗಳು ಮುಗುಳ್ನಗುತ್ತಾ ಈ ವಿಷಯಕ್ಕೆ ಬರಲು ಬಹು ಹೆಚ್ಚಿನ ಸಮಯ ತಗುಲಿತು ಎಂದರು. ಅವರು ಏರುಹಾದಿಯಲ್ಲಿ ನಡೆಯುವಾಗ ಮಕ್ಕಳು ಶುಭ ಕೋರಿದರು. ಅವರೆಡೆ ತಿರುಗಿ ಗುರುಗಳು ಸಹಜಮಾರ್ಗವು ಮೌನವನ್ನು ಕಲಿಸುತ್ತದೆ ಎಂಬುದನ್ನು ನೆನೆಪಿಟ್ಟುಕೊಳ್ಳಿರೆಂದು ಹೇಳಿದರು.

ಆಗಸ್ಟ್ 21ರಂದು ಗುರುಗಳು ಮುಂಜಾನೆಯ ಮತ್ತು ಸಂಜೆಯ ಸತ್ಸಂಗವನ್ನು ತುಂಬಿದ್ದ ಪ್ರಾಂಗಣದಲ್ಲಿ ನಡೆಸಿಕೊಟ್ಟರು. ಸಂಜೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕಥಕ್ ನೃತ್ಯಪ್ರದರ್ಶನವಿತ್ತು.

ಸಂಪುಟ 4 ಸಂಚಿಕೆ 5 ನವೆಂಬರ್ 2011

ಶ್ರೀ ರಾಮಚಂದ್ರ ಮಿಷನ್

ಎಖೋಸ್ ಇಂಡಿಯ ವಾರ್ತಾಪತ್ರ





ಆಗಸ್ಟ್ 22ರಂದು ಗುರುಗಳು ಮುಂಜಾನೆ 7.30ಕ್ಕೆ ಸತ್ಸಂಗ ನಡೆಸಿಕೊಟ್ಟ ನಂತರ ಭಜನೆಗಳನ್ನು ಆಲಿಸಿದರು. ಸೋದರಿಯೊಬ್ಬರು ಪ್ರಾರ್ಥನೆಯ ಸರಿಯಾದ ರೀತಿಯನ್ನು ಕೇಳಿದ್ದಕ್ಕೆ ಉತ್ತರಿಸುತ್ತಾ ಅವರು ಹೇಳಿದರು, "ಯಾರನ್ನು ಕುರಿತು ಪ್ರಾರ್ಥಿಸಬೇಕೋ ಅವರನ್ನು ನಿಮ್ಮ ತೋಳಿನಲ್ಲಿಯ ಮಗುವಂತೆ ಹಿಡಿದು ಗುರುಗಳ ಮುಂದೆ ನಿಲ್ಲಿಸಿ 'ಈ ವ್ಯಕ್ತಿಯನ್ನು ನೋಡಿಕೊಳ್ಳಿ' ಎನ್ನಿ, ಸಹಜಮಾರ್ಗದಲ್ಲಿ ಹೀಗೆಯೇ ನಾವು ಪ್ರಾರ್ಥಿಸುವುದು." ಸಂಜೆಯ ಸತ್ಸಂಗದ ನಂತರ ಸೋ. ಸೌಮ್ಯರವರ ನೃತ್ಯಪ್ರದರ್ಶನವಿತ್ತು.

23ರಂದು ಗುರುಗಳು ವಿಮಾನನಿಲ್ದಾಣಕ್ಕೆ ಹೊರಟು ನಿಂತಾಗ ಅಭ್ಯಾಸಿಯೊಬ್ಬರು ಕೇವಲ ನೋಂದಣಿಗಾಗಿ ಪ್ರವಾಸ ಮಾಡುವ ಅಗತ್ಯವಿತ್ತೇ, ಯಾರನ್ನಾದರೂ ಅಧಿಕೃತವಾಗಿ ನೇಮಿಸಬಹುದಿತ್ತು ಎಂದಾಗ ಅವರು ನಿಮ್ಮನ್ನೆಲ್ಲ ನೋಡಲೆಂದೇ ಬಂದಿರುವೆನೆಂದರು.

## ದೆಹಲಿ 23–30 ಆಗಸ್ಟ್ 2011

ಗುರುಗಳು 23ರ ಸಂಜೆಯಂದು ದೆಹಲಿ ತಲುಪಿದರು. ನಿಲ್ದಾಣದಲ್ಲಿ ಅಭ್ಯಾಸಿಗಳು ಸ್ವಾಗತಿಸಿದಾಗ ಅವರು ಎಂದಿನಂತೆ ಉಲ್ಲಾಸದಿಂದಿದ್ದರು. ಗುರುಗಳ ಸನ್ನಿಧಿಯಲ್ಲಿ ಸಮಯ ಸರಿದಿದ್ದೇ ತಿಳಿಯಲಿಲ್ಲ. ಗುರುಗಳೊಂದಿಗಿದ್ದವರು ನೋಡಿದಂತೆ ಅವರು ಕಚೇರಿಯಲ್ಲಿ ಅವಿಶ್ರಾಂತ ಕಾರ್ಯನಿರತರಾಗಿ, ಅಭ್ಯಾಸಿಗಳೊಂದಿಗಿನ ಒಡನಾಟ, ಸತ್ಸಂಗಗಳನ್ನು ನಡೆಸಿ ಕೊಡುವುದನ್ನು ಸೇರಿದಂತೆ ತಮ್ಮ ಗುರುಗಳ ಸಂದೇಶವನ್ನು ಬಿತ್ತರಿಸಲು ಆಧ್ಯಾತ್ಮಿಕ ಸಂಪತ್ತನ್ನು ಅಭ್ಯಾಸಿಗಳ ಮೇಲೆ ಸುರಿಸಿದರು.

ಆಗಸ್ಟ್ 27ರಂದು ಗುರುಗಳು ಗುರ್‌ಗಾಂವ್ ಆಶ್ರಮಕ್ಕೆ ಪ್ರಸ್ಥಾನಿಸಿದರು. ಮರುದಿನ ಮುಂಜಾನೆ ಬಹುಸಂಖ್ಯೆಯಲ್ಲಿ ನೆರೆದ ಅಭ್ಯಾಸಿಗಳಿಗಾಗಿ ಸತ್ಸಂಗ ನಡೆಸಿದರು. ಅವರು ನಂತರ ಅಭ್ಯಾಸಿಗಳೊಡನೆ ಸಮಯ ಕಳೆದರು ಹಾಗೂ ಅರ್ಧ ಡಜ಼ನ್ನಿಗೂ ಹೆಚ್ಚಿನ ಶಿಶುಗಳಿಗೆ ನಾಮಕರಣ ಮಾಡಿದರು. ಅದೇ ದಿನ ಅವರು ನಗರಕ್ಕೆ ವಾಪಸಾದರು.

ಆಗಸ್ಟ್ 29ರಂದು ಗುರುಗಳು ದೆಹಲಿಯ ಹೊಸ ಆಶ್ರಮದ ದ್ವಿತೀಯ ಹಂತದ ನೋಂದಣಿಗಾಗಿ ತೆರಳಿದರು. ಅವರು ತಮ್ಮ ಗುರುಗಳ ಕಾರ್ಯದಲ್ಲಿ ಬಲು ಉತ್ಸಾಹ ಮತ್ತು ಸಂತೋಷದಿಂದ ಮಗ್ನರಾಗಿರುವುದು ಕಂಡುಬಂದಿತು. ಮನೆಗೆ ಮರಳಿದ ನಂತರ ಅಭ್ಯಾಸಿಯೊಬ್ಬರು ನೋಂದಣಿಯ ಈ ಹಂತ ಮುಗಿದಿರುವುದು ಅವರಿಗೆ ಸಂತಸ ತಂದಿರಬೇಕೆಂದು ಹೇಳಲಾಗಿ ಗುರುಗಳು ಮುಗುಳ್ನಗುವಿನೊಂದಿಗೆ ಹೇಳಿದರು, "ಇದು ಭವಿಷ್ಯತ್ತಿಗಾಗಿ, ಆದರೆ ವರ್ತಮಾನದಲ್ಲಿ ಮಾಡುವುದು ಬಹಳಷ್ಟಿದೆ." ಕೂಡಲೇ ಸೇರಿದವರಿಗಾಗಿ ಸತ್ಸಂಗವನ್ನು ನಡೆಸಿಕೊಟ್ಟರು.

## ಚೆನ್ನೈ ಆಗಸ್ಟ್30–ಸೆಪ್ಟೆಂಬರ್30

ದೆಹಲಿಯಿಂದ ಗುರುಗಳು ಚೆನ್ನೈಗೆ ಆಗಸ್ಟ್ 30ರಂದು ಬಂದರು. 31ರಂದು ಮುಂಜಾನೆ ಕುಟೀರದಲ್ಲಿ ನೆರೆದ ಅಭ್ಯಾಸಿಗಳಿಗಾಗಿ ಸತ್ಸಂಗ ನಡೆಸಿಕೊಟ್ಟರು. ಸ್ವಲ್ಪವೇ ಹೊತ್ತಿನಲ್ಲಿ ಅಭ್ಯಾಸಿ ದಂಪತಿಗಳು ರಂಜ಼ಾನ್ ಪ್ರಯುಕ್ತ ಬೈಠಕನ್ನು ನೀಡಬೇಕೆಂದು ಕೇಳಿಕೊಂಡಾಗ ಗುರುಗಳು ಈಗಷ್ಟೇ ಸತ್ಸಂಗವನ್ನು ನಡೆಸಿದ್ದರಿಂದ ತಾವು ಸುಸ್ತಾಗಿರುವುದಾಗಿ ಹೇಳಿದರು. ನಂತರ ಸ್ವಲ್ಪ ತಡೆದು ಅವರಿಗೆ ಇನ್ನೈದು ನಿಮಿಷಗಳಲ್ಲಿ ಬೈಠಕನ್ನು ನೀಡುವುದಾಗಿ ಹೇಳಿದರು. ಇದು ಗುರುಗಳು ಹೇಗೆ ಸ್ವತಃ ತಮ್ಮ ಅನನುಕೂಲತೆಯನ್ನೂ ಲೆಕ್ಕಿಸದೆ ಬಿನ್ನಹಕ್ಕೆ ಓಗೊಡುತ್ತಾರೆಂದು ತೋರಿಸುತ್ತದೆ.

ಪೂರ್ಣ ಸೆಪ್ಟೆಂಬರ್ ತಿಂಗಳು ಗುರುಗಳು ಚೆನ್ನೈನಲ್ಲಿ, ಬಹುಪಾಲು ಮಣಪ್ಪಾಕ್ಕಂನಲ್ಲಿಯೇ ಉಳಿದರು. ಅವರು ನಿತ್ಯಕ್ರಮದಂತೆ ತಮ್ಮ ಕೋಣೆಯಿಂದ ಹೊರಟು ಕುಟೀರದ ಹಿಂಭಾಗದ ಮಾರ್ಗವಾಗಿ ಮುಂಭಾಗಕ್ಕೆ ಸಣ್ಣ ನಡಿಗೆಯ ನಂತರ ಅಲ್ಲಿ ಕುಳಿತುಕೊಳ್ಳುತ್ತಿದ್ದರು. ಸೆಪ್ಟೆಂಬರ್ 16ರಂದು ಮುಂಜಾನೆ 7ಘಂಟೆಗೆ ಉಪಯೋಗಿಸಲು ಸಿದ್ಧವಾದ ಹೊಸ ವಾಚನಾಲಯವನ್ನು ಉದ್ಘಾಟಿಸಿ ಪ್ರಸಾದವನ್ನು ಅಲ್ಲಿನ ಸ್ವಯಂಸೇವಕರಿಗೆ ವಿತರಿಸಿದರು. ಸೆಪ್ಟೆಂಬರ್ 25ರಂದು ಗಾರ್ಡನ್ ಆಫ್ ಹಾರ್ಟ್ಸ್‌ನ ಅಭ್ಯಾಸಿಗಳು ನೆಲಮಾಳಿಗೆಯಲ್ಲಿ ಅಣಿಗೊಳಿಸಿದ್ದ ರಾತ್ರಿಯ ಭೋಜನಕ್ಕೆ ಗುರುಗಳನ್ನು ಆಹ್ವಾನಿಸಿದ್ದರು. ಗುರುಗಳು ಅಲ್ಲಿ ಸೇರಿದ್ದವರಿಗೆ ಅದರಲ್ಲೂ ಪಾಲಕರಿಗೆ ಮಕ್ಕಳನ್ನು ಬೆಳೆಸುವ ಕುರಿತು ಉಪನ್ಯಾಸ ನೀಡಿದರು. ಶೀಘ್ರವೇ ಮಿಷನ್ನಿನ ಜಾಲತಾಣದಲ್ಲಿ ಈ ಉಪನ್ಯಾಸವು ಲಭ್ಯವಾಗುತ್ತದೆ.



ಸಂಪುಟ 4 ಸಂಚಿಕೆ 5 ನವೆಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ



## ಕೊಲ್ಕಾತಾ 30 ಸೆಪ್ಟೆಂಬರ್–8 ಅಕ್ಟೋಬರ್

ಸೆಪ್ಟೆಂಬರ್ 30ರಂದು ಅಪರಾಹ್ನ 3.40ಕ್ಕೆ ಗುರುಗಳು ಕೊಲ್ಕಾತಾ ತಲುಪಿದರು. ಕಳೆದ ಒಂದೂವರೆ ವರ್ಷದಿಂದ ಅವರನ್ನು ಕಾಣಲು ಹಂಬಲಿಸುತ್ತಿದ್ದ ಅಭ್ಯಾಸಿಗಳ ಪ್ರೇಮಭರಿತ ಸ್ವಾಗತವನ್ನು ಸ್ವೀಕರಿಸಿದರು. ಅಕ್ಟೋಬರ್ 3ರ ಹೊತ್ತಿಗೆ ಆಶ್ರಮದಲ್ಲಿ ಸುಮಾರು 1500 ಅಭ್ಯಾಸಿಗಳು ಸೇರಿದ್ದರು. ಅಕ್ಟೋಬರ್ 1 ಮತ್ತು 2ರಂದು ಗುರುಗಳು ಮುಂಜಾನೆಯ ಸತ್ಸಂಗವನ್ನು ನಡೆಸಿದರು.

ಕಾಕತಾಳೀಯವಾಗಿ ಪೌರ್ವಾತ್ಯ ಪ್ರದೇಶಗಳಿಗಾಗಿ GSTಯ ಪರಿಚಯಾತ್ಮಕ ಸಭೆಯನ್ನು ಗುರುಗಳ ಭೇಟಿಯ ಸಮಯದಲ್ಲೇ ಆಯೋಜಿಸಲಾಗಿತ್ತು. ಇದನ್ನು ಎಲ್ಲಾ ಕೇಂದ್ರ ಹಾಗೂ ವಲಯಪ್ರಮುಖರು ಮತ್ತು ಕೆಲವು ಪ್ರಶಿಕ್ಷಕರಿಗಾಗಿ ಅಕ್ಟೋಬರ್ 1 ಮತ್ತು 2ರಂದು ನಡೆಸಲಾಯಿತು. ಭಾಗಿಗಳಿಗೆ GSTಯ ವಿವಿಧ ಕಾರ್ಯಗಳ ಬಗ್ಗೆ ಆಯಾ ಕಾರ್ಯಸಂಬಂಧಿ ಮುಖ್ಯಸ್ಥರು ಮುಖ್ಯಾಂಶಗಳನ್ನು ನೀಡಿದರು.

ಅಕ್ಟೋಬರ್ 2ರಂದು ಸಂಜೆ ಮಕ್ಕಳು ಕವ್ವಾಲಿ ಹಾಡಿದರು ಮತ್ತು ಸೋದರಿಯರು ಗರ್ಬಾ ನೃತ್ಯ ಮಾಡಿದರು. ಗುರುಗಳು ಕಾರ್ಯಕ್ರಮವನ್ನು ಆನಂದಿಸಿದರಲ್ಲದೆ ಸಮೂಹ ಚಿತ್ರಕ್ಕೂ ಅನುಮತಿ ನೀಡಿದರು. ಅವರು ಪಾಕಶಾಲಾ ತಂಡದ ವಿನಂತಿಯನ್ನು ಮನ್ನಿಸಿ ಅಭ್ಯಾಸಿಗಳೊಂದಿಗೆ ಭೋಜನಶಾಲೆಯಲ್ಲಿ ಭೋಜನ ಮಾಡಿದರು. ಉಪಸ್ಥಿತ ಅಭ್ಯಾಸಿಗಳಿಗೆ ಇದೊಂದು ಸ್ಮರಣೀಯ ಮತ್ತು ಆನಂದದಾಯಕ ಅನುಭವವಾಗಿತ್ತು.

3ನೇ ತಾರೀಖಿನಂದು ಸ್ವತಃ ಗುರುಗಳೇ ಕಾರ್ಯಸಮಿತಿ ಸಭೆಯನ್ನು ನಡೆಸಿದರು. ಸಭೆಯ ನಂತರ ಅವರು ಸೋ. ಕಮಲೇಶ್ ಡಿ. ಪಟೇಲ್‌ರವರನ್ನು ತಮ್ಮ ಆಧ್ಯಾತ್ಮಿಕ ಉತ್ತರಾಧಿಕಾರಿ ಮತ್ತು ತಮ್ಮ ಜೀವನಕಾಲದ ನಂತರ ಮಿಷನ್ನಿನ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಿರುವುದಾಗಿ ಘೋಷಿಸಿದರು. ಅವರು ಕೂಡಲೇ ದೃಶ್ಯಸಂದೇಶವೊಂದನ್ನು ಮುದ್ರಿಸಿ ಪ್ರಪಂಚದಾದ್ಯಂತ ಎಲ್ಲಾ ಕೇಂದ್ರಗಳಲ್ಲಿನ ಅಭ್ಯಾಸಿಗಳಿಗೆ ತೋರಿಸುವ ವ್ಯವಸ್ಥೆ ಮಾಡಿದರು. ಸಂಜೆ ಗುರುಗಳು 5 ಘಂಟೆಗೆ ಸತ್ಸಂಗವನ್ನು ನಡೆಸಿಕೊಟ್ಟು ನೆರೆದ ಅಭ್ಯಾಸಿಗಳಿಗೆ ಸೋ. ಕಮಲೇಶ್ ಪಟೇಲ್‌ರವರ ನೇಮಕಾತಿಯನ್ನು ಉದ್ಘೋಷಿಸಿ ಅವರನ್ನು ಪರಿಚಯಿಸಿದರು.

5ನೇ ತಾರೀಖು ಮುಂಜಾನೆಯ ಸತ್ಸಂಗವನ್ನು ಸೋ. ಕಮಲೇಶ್ ಪಟೇಲ್‌ರವರು ನಡೆಸಿ, ಸಾಧನೆಯ ಪ್ರಾಮುಖ್ಯತೆಯ ಕುರಿತು ಉಪನ್ಯಾಸ ನೀಡಿದರು. ಗುರುಗಳು ಸೋ. ಅಜಯ್ ಭಟ್ಟರ್‌ವರ ನಿವಾಸದಲ್ಲಿ ಅಕ್ಟೋಬರ್ 8ರವರೆಗೆ ತಂಗಿದ್ದು ಗೌಹಾಟಿಗೆ ಹೊರಟರು.



## ಗೌಹಾಟಿ 8–10 ಅಕ್ಟೋಬರ್

ಭಾರತದ ಈಶಾನ್ಯ ಭಾಗಕ್ಕೆ ಗುರುಗಳು ಭೇಟಿ ನೀಡಿ 18 ವರ್ಷಗಳೇ ಸಂದಿದ್ದು ಅವರ ಗೌಹಾಟಿಯ ಭೇಟಿಯಿಂದ ಬಹುಕಾಲದ ನಿರೀಕ್ಷಣೆಯು ಕೊನೆಗೊಂಡಿತು. 9ರಂದು ಗುರುಗಳು ನಗರದಿಂದ 25 ಕಿ.ಮೀ. ದೂರದಲ್ಲಿ ಸ್ಥಿತ ಹಸಿರು ಮತ್ತು ಗುಡ್ಡಬೆಟ್ಟಗಳಿಂದಾವೃತ ವಲಯಾಶ್ರಮದಲ್ಲಿ ದಿನವಿಡೀ ಉಳಿದರು. ಗುರುಗಳನ್ನು ಸಾಂಪ್ರದಾಯಿಕ ಬಿಹು ನೃತ್ಯದಿಂದ ಸ್ವಾಗತಿಸಲಾಯಿತು.

ಸತ್ಸಂಗದ ನಂತರ ಗುರುಗಳನ್ನು ಭಾರತದ ಈಶಾನ್ಯ ಭಾಗದ ಏಳು ರಾಜ್ಯಗಳ ಸಾಂಪ್ರದಾಯಿಕ ರೀತಿಯಲ್ಲಿ ಸ್ವಾಗತಿಸಲಾಯಿತು. ಅವರು ತಮ್ಮ ಉಪನ್ಯಾಸದಲ್ಲಿ ಸಂಖ್ಯೆ 7ರ ಸೊಗಸನ್ನು ಸಂಗೀತದ ಸಪ್ತಸ್ವರಗಳಿಗೆ ಹೋಲಿಸಿದರು. ಕೇವಲ ಒಂದೇ ಸ್ವರವು ಸಂಗೀತವಾಗಲಾರದು, ಸಪ್ತಸ್ವರಗಳೂ ಅತ್ಯವಶ್ಯ. ನಾವು ಪ್ರತ್ಯೇಕ ರಾಜ್ಯ,ಸಂಸ್ಕೃತಿ, ಭಾಷೆಗಳ ಹಿನ್ನೆಲೆಯವರಾದರೂ ನಮ್ಮ ಗುರಿಗಳು ಒಂದೇ, ಹಾಗಾಗಿ ನಮ್ಮಲ್ಲಿ ಏಕತಾ ಭಾವನೆ ಹೊಮ್ಮಬೇಕು ಎಂದು ಅವರು ಹೇಳಿದರು.

ಸತ್ಸಂಗದ ನಂತರ ಗುರುಗಳು ನೋಂದಣಿಯನ್ನು ನೆರವೇರಿಸಿದರು. ಸಂಜೆಯ ಸತ್ಸಂಗದ ನಂತರ ಅವರು ವಲಯಾಶ್ರಮವನ್ನು 'ಜ್ಯೋತಿ' ಎಂದು ಹೆಸರಿಸಿದರು ಮತ್ತು ಪ್ರತೀ ಭಾನುವಾರ ಅಲ್ಲಿ ಸತ್ಸಂಗ ನಡೆಸಬೇಕೆಂದು ಸೂಚಿಸಿದರು.

10ರಂದು ಗುರುಗಳು ಗೌಹಾಟಿ ನಗರದ ಆಶ್ರಮದ ಧ್ಯಾನಮಂದಿರವನ್ನು ಉದ್ಘಾಟಿಸಿದರು. ಅವರು ಸತ್ಸಂಗ ನಡೆಸಿ ಸಭೆಯನ್ನುದ್ದೇಶಿಸಿ ಹೇಳಿದರು, "ಸಾಧನೆಯು ಜೀವನಮಾರ್ಗವಾಗಿದೆ. ಇದು ಜೀವನದಲ್ಲಿ ಉಸಿರಿದ್ದಂತೆ. ನಮ್ಮ ಭೌತಿಕ ಶರೀರವನ್ನು ನಿರ್ವಹಿಸಲು ಆಹಾರದ ಅಗತ್ಯವಿದ್ದಂತೆ, ಆಧ್ಯಾತ್ಮಿಕ ಶರೀರಕ್ಕೆ ಪ್ರಾಣಾಹುತಿಯ ಅಗತ್ಯವಿದೆ. ಆಧ್ಯಾತ್ಮಿಕ ಶರೀರವನ್ನು ಅಲಕ್ಷಿಸಿದರೆ ಆತ್ಮ ಮರಣಿಸುವುದು."




ಸಂಪುಟ 4 ಸಂಚಿಕೆ 5 ನವೆಂಬರ್ 2011

ಶ್ರೀ ರಾಮಚಂದ್ರ ಮಿಷನ್

ಎಖೋಸ್ ಇಂಡಿಯ ವಾರ್ತಾಪತ್ರ





## ದೆಹಲಿ 10–13ಅಕ್ಟೋಬರ್

ಗುರುಗಳು ಅಕ್ಟೋಬರ್ 10ರ ಸಂಜೆ ಸುಮಾರು 7.30ರ ಹೊತ್ತಿಗೆ ಗೌಹಾಟಿಯಿಂದ ದೆಹಲಿಗೆ ವಿಮಾನದಲ್ಲಿ ತಲುಪಿದಾಗ ಸುಮಾರು ನೂರು ಅಭ್ಯಾಸಿಗಳಿಂದ ಸ್ವಾಗತ ಪಡೆದರು. ಗುರುಗಳು ಉಲ್ಲಸಿತರಾಗಿದ್ದು ಸಂತಸದಿಂದ ಎಲ್ಲರಿಗೂ ಶುಭ ಕೋರಿದರು. ಅಭ್ಯಾಸಿ ಸೋದರೊಬ್ಬರ ನಿವಾಸದಲ್ಲಿ ರಾತ್ರಿ ಭೋಜನಾನಂತರ ತಮ್ಮ ಹಾಸ್ಯಭರಿತ ವಾಕ್‌ಶೈಲಿಯಿಂದ ಎಲ್ಲರನ್ನು ಹರ್ಷಗೊಳಿಸಿದರು.

ಮರುದಿನ ಅವರು ಗುರ್‌ಗಾಂವ್ ಆಶ್ರಮಕ್ಕೆ ಸಂಜೆ 4ಘಂಟೆಗೆ ತಲುಪಿದರು. ಕೂಡಲೇ ಅವರು ಹುಲ್ಲುಹಾಸಿನ ಮೇಲೆ ಆಸೀನರಾಗಿ ಅಭ್ಯಾಸಿಗಳೊಡನೆ ಅರ್ಧ ಘಂಟೆಗೂ ಮೀರಿ ಸಂಭಾಷಿಸಿದರು. ಅಲ್ಲಿ ಸ್ಥಾಪಿಸಲಾದ ಮೂರ್ತಿಯೊಂದರ ಬಗ್ಗೆ ವಿಚಾರಿಸಲಾಗಿ ಅವರು ಅದು 'ದ್ರೋಣಾಚಾರ್ಯ'ರದ್ದೆಂದೂ, ಗುರ್‌ಗಾಂವ್ ನ ಮೂಲ 'ಗುರುಗ್ರಾಮ್' ಎಂಬ ಶಬ್ದವಾದ್ದರಿಂದ ಇಲ್ಲಿಡಲಾಗಿಯೆಂದು ಹೇಳಿದರು. (ಗುರುಗ್ರಾಮವು ದ್ರೋಣಾಚಾರ್ಯರ ಗ್ರಾಮವಿದ್ದಿತೆಂದು ದಂತಕಥೆ.) ಅವರು ಸೋ. ಕಮಲೇಶ್ ಪಟೇಲ್‌ರವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಪರಿಚಯಿಸಿದ ನಂತರ ಸತ್ಸಂಗ ನಡೆಸಿದರು.

ಅಕ್ಟೋಬರ್ 12ರಂದು ಗುರುಗಳು ಧ್ಯಾನಮಂದಿರಕ್ಕೆ ಮುಂಜಾನೆ 7ಘಂಟೆಗೇ ಬಂದು ಸತ್ಸಂಗ ನಡೆಸಿದರು. ಅವರು ಅಭ್ಯಾಸಿಗಳು ಇನ್ನೂ ಬರುತ್ತಿರುವುದನ್ನು ಕಂಡು ಕಾಯಲು ಯೋಚಿಸಿ ಸಣ್ಣ ಉಪನ್ಯಾಸ ನೀಡಲು ನಿರ್ಧರಿಸಿದರು. ಅವರು ಸಾಧನೆಯ ಸರಿಯಾದ ಕ್ರಮ ಮತ್ತು ಮನಸ್ಸಿನ ಪ್ರಾಮುಖ್ಯತೆಯ ಕುರಿತು ಒತ್ತಿ ಹೇಳಿದರು ಮತ್ತು ಸೋ. ಕಮಲೇಶ್ ಪಟೇಲ್‌ರವರನ್ನು ಎಲ್ಲರಿಗೂ ಪರಿಚಯಿಸುತ್ತಾ ತಮ್ಮ ಉಪನ್ಯಾಸವನ್ನು ಮುಕ್ತಾಯಗೊಳಿಸಿದರು. ಸತ್ಸಂಗದ ನಂತರ ಅವರು ಎರಡು ವಿವಾಹಗಳನ್ನು ನೆರವೇರಿಸಿದರು. ಅಕ್ಟೋಬರ್ 13ರಂದು ಗುರುಗಳು ಮುಂಜಾನೆಯೇ ತಯಾರಾಗಿ ಉಪಸ್ಥಿತರಿಗಾಗಿ 6.30ಕ್ಕೆ ಸತ್ಸಂಗ ನಡೆಸಿಕೊಟ್ಟರು ಹಾಗೂ ಉಪಾಹಾರದ ನಂತರ ಸುಮಾರು 8 ಘಂಟೆಯ ಹೊತ್ತಿಗೆ ವಿಮಾನ ನಿಲ್ದಾಣಕ್ಕೆ ಹೊರಟರು.

## ದುಬೈ

ಗುರುಗಳು ದುಬೈಗೆ ಅಪರಾಹ್ನ ಸುಮಾರು 1.15ಕ್ಕೆ ಬಂದಿಳಿದು ಸೋ.ಸಂಜಯ್ ಮಹರಿಶ್‌ರವರ ನಿವಾಸಕ್ಕೆ 2.30ಕ್ಕೆ ತಲುಪಿದರು. ಅವರು ಒಳ್ಳೆಯ ಲಹರಿಯಲ್ಲಿದ್ದು ದೆಹಲಿಯ ಬಹಳಷ್ಟು ಅಭ್ಯಾಸಿಗಳು ಅವರೊಂದಿಗಿದ್ದರು. ಪ್ರಪಂಚದಾದ್ಯಂತ ನೂರಾರು ಅಭ್ಯಾಸಿಗಳು ಬರತೊಡಗಿ 14ರ ದಿನದಂದು ಯುಎಇ, ಕುವೈತ್, ಇರಾನ್, ಬಹ್ರೇನ್, ಓಮನ್, ಪಾಕಿಸ್ತಾನ, ಭಾರತ, ಆಫ್ರಿಕಾ, ಯೂರೋಪ್ ಹಾಗೂ ಅಮೇರಿಕಾ ಸೇರಿದಂತೆ ಇಪ್ಪತ್ತೈದು ರಾಷ್ಟ್ರಗಳಿಂದ 1050 ಅಭ್ಯಾಸಿಗಳು ಜಮಾಯಿಸಿದ್ದರು.

ಗುರುಗಳು 14ರ ಮುಂಜಾನೆ 'ಪರಿವರ್ತನೆಗಾಗಿ ಪ್ರಾರ್ಥಿಸಿ–ಪರಿವರ್ತನೆಯಾಗಿ' ಸಭೆಯನ್ನು ಸತ್ಸಂಗದಿಂದ ಉದ್ಘಾಟಿಸಿದರು ಮತ್ತು ಸೋ. ಕಮಲೇಶ್ ಪಟೇಲ್‌ರವರನ್ನು ಪರಿಚಯಿಸಿದರು.

ಅಕ್ಟೋಬರ್ 15ರ ಮುಂಜಾನೆ ಸತ್ಸಂಗದ ನಂತರ ಪ್ರಶಿಕ್ಷಕರ ಸಮಾವೇಶದಲ್ಲಿ ಅವರು ಜಾಗತಿಕ ಸೇವಾ ಸಮಿತಿಯನ್ನು ಪರಿಚಯಿಸಿದರು. ಬಾಬೂಜಿಯವರ ಕಾಲದ ಒಂದು ಕಿರಿದಾದ ಹಾಗೂ ಸರಳ ಸಂಸ್ಥೆಯಿಂದ ಮಿಷನ್ ಇಂದು ಬಹಳ ಬೆಳೆದಿದೆ ಎಂದು ಅವರು ಹೇಳಿದರು.

"...ಮತ್ತೊಮ್ಮೆ ನಾನು ನಿಮಗೆಲ್ಲರಿಗೂ ಹೇಳುತ್ತಿದ್ದೇನೆ, ನನ್ನ ಕರ್ತವ್ಯವು ಜ್ಯೋತಿಯನ್ನು ಬೆಳಗಿಸುವಂತಹದ್ದು. ಅದು ನಿರಂತರ ಉರಿಯಲು, ಎಣ್ಣೆಯನ್ನು ಹಾಕುವುದಾಗಲೀ, ಬತ್ತಿಯನ್ನು ಸರಿಪಡಿಸುವುದಾಗಲೀ ನಿಮ್ಮ ಕೆಲಸ. ನೀವು ಇಂದಷ್ಟೇ ಅಲ್ಲ, ಭವಿಷ್ಯತ್ತಿನಲ್ಲಿಯೂ ಸಹಕರಿಸಬೇಕೆಂದು ನನ್ನ ಪ್ರಾರ್ಥನೆ. ನಮ್ಮ ಸೇವಾ ತಂಡವು ಅದನ್ನು ಜಾಗತಿಕ ಸೇವಾಸಮಿತಿಯೆಂದು ಕರೆಯಲಾಗುವುದು ಇದಕ್ಕೇ– ಅವರು ನಿಮ್ಮ ಮೇಲೆ ಅಧಿಕಾರ ಚಲಾಯಿಸುವುದಿಲ್ಲ, ನಿಮಗೆ ಕಲಿಸುವುದೂ ಇಲ್ಲ, ಅವರಿರುವುದು ನಿಮ್ಮಲ್ಲಿ ಸಮಸ್ಯೆಗಳಿದ್ದಲ್ಲಿ ಅವನ್ನು ಹಂಚಿಕೊಳ್ಳಲು. ಅವನ್ನು ಪರಿಹರಿಸುವುದು, ಏನು ಮಾಡಬಹುದು, ಭಾರತದಲ್ಲಿ ನನ್ನ ಅನುಭವ, ಇರಾನಿನಲ್ಲಿನ ನಿಮ್ಮ ಅನುಭವ ಇತ್ಯಾದಿ. ಹಾಗಾಗಿ ಇದು ಕೇವಲ ವಿನಿಮಯ ಸೌಲಭ್ಯ, ನಮ್ಮ ಕಾರ್ಯಗಳ ವಿನಿಮಯ, ಆ ಕಾರ್ಯಗಳಿಂದ ನಮಗಾದ ಅನುಭವ ಹಾಗೂ ಎಲ್ಲವನ್ನೂ ಸುಧಾರಿಸಲು ಮುಂದೆ ನಾವೇನು ಮಾಡಬಹುದೆಂಬುದು."

ಗುರುಗಳು ಯುಎಇ ಮತ್ತು ಇರಾನಿನ ಅಭ್ಯಾಸಿಗಳನ್ನು ಭೇಟಿ ಮಾಡಿದರು. ಅವರೊಂದಿಗಿನ ಸಂವಾದದಲ್ಲಿ ಅವರು ಹೇಳಿದರು, "ಬಯಕೆ ಮತ್ತು ಪ್ರೇಮದ ನಡುವೆ ಬಹಳ ವ್ಯತ್ಯಾಸವಿದೆ. ನನಗೆ ಗುರುಗಳು ಬೇಕು, ಏತಕ್ಕಾಗಿ? ನಾನು ಗುರುಗಳನ್ನು ಪ್ರೇಮಿಸುತ್ತೇನೆ,ಆದ್ದರಿಂದ ನಾನು ವಿಧೇಯ. ಹಾಗಾಗಿ ವಿಧೇಯತೆಯು ಹತ್ತು ನಿಯಮಗಳಿಂದ ಬಂದದ್ದಲ್ಲ; ನಾವು ಪ್ರೇಮಿಸುತ್ತೇವೆ, ಆದ್ದರಿಂದ ವಿಧೇಯರಾಗಿದ್ದೇವೆ. ವಿಧೇಯತೆಯು ಹೃದಯದಿಂದ ಹೊಮ್ಮುವಂತಹದ್ದು, ಮನಸ್ಸು ಅಥವಾ ಭಯದಿಂದಲ್ಲ, ಪ್ರೇಮದಿಂದ."

ಗುರುಗಳು ಅಕ್ಟೋಬರ್ 22ರಂದು ಮುಂಬೈಗಾಗಿ ಹೊರಟು ಅಲ್ಲಿಂದ ಅಹಮದಾಬಾದಿಗೆ ಅಕ್ಟೋಬರ್ 25ರಂದು ಹೊರಟರು.

ಸಂಪುಟ 4 ಸಂಚಿಕೆ 5 ನವೆಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ

# ಪೂರ್ಣ ದಿನದ ಕಾರ್ಯಕ್ರಮಗಳು



## ವಿರುಧುನಗರ, ತಮಿಳು ನಾಡು

ಪ್ರಾದೇಶಿಕ ಸಂಯೋಜಕರಾದ ಸೋ. ಎನ್.ಪ್ರಕಾಶ್ ಮತ್ತು ವಲಯ ಸಂಚಾಲಕರಾದ ಸೋ. ಟಿ.ವಿ.ವಿಶ್ವನಾಥ ರಾವ್‌ರವರು ವಿರುಧುನಗರದ ಚಿನ್ನವಲ್ಲಿಕುಳಮ್‌ನ ಆಶ್ರಮಕ್ಕೆ 21 ಆಗಸ್ಟ್ ರಂದು ಭೇಟಿ ನೀಡಿದರು. ಸುಮಾರು 50ರಷ್ಟು ಅಭ್ಯಾಸಿ ಸಹೋದರ ಸಹೋದರಿಯರು ವಿರುಧುನಗರ, ಚಿನ್ನವಲ್ಲಿಕುಳಮ್, ಅರುಪ್ಪು ಕೋಟ್ಟೈ, ಕರಿಯಪಟ್ಟಿ, ಕೊವಿಲ್ ಪಟ್ಟಿ, ಶ್ರೀವಲ್ಲಿಪುತ್ತೂರ್, ರಾಜಪಾಳ್ಯ ಮತ್ತು ಶಿವಕಾಶಿ ಕೇಂದ್ರಗಳಿಂದ ಬಂದು ಪೂರ್ಣ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬೆಳಗಿನ ಸತ್ಸಂಗದ ನಂತರ ಸೋ. ಪ್ರಕಾಶ್‌ರವರು ಒಂದು ಉತ್ತೇಜನಕಾರಿಯಾದ ಭಾಷಣವನ್ನು ಮಾಡಿದರು. ಭೋಜನಾನಂತರ "ಅಭ್ಯಾಸಿಗಳ ಉತ್ತಮ ಗುಣಮಟ್ಟ" ಎಂಬ ವಿಷಯದ ಬಗ್ಗೆ ನಡೆದ ಸಮೂಹಚರ್ಚೆ ಅನೇಕ ಅಂಶಗಳನ್ನು ಹೊರತಂದಿತು. ಅಭ್ಯಾಸಿಗಳು ಗುರುಗಳ ಉಪಸ್ಥಿತಿ ಮತ್ತು ಮಾರ್ಗದರ್ಶನವನ್ನು ಅನೇಕ ಸಂದರ್ಭಗಳಲ್ಲಿ ಅನುಭವಿಸಿರುವದನ್ನು ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು. ಪೂರ್ಣದಿನದ ಕಾರ್ಯಕ್ರಮವು ಸಂಜೆಯ ಸತ್ಸಂಗದ ನಂತರ ಮುಕ್ತಾಯವಾಯಿತು.

## ಗೌಹಾಟಿ

ಯುವ ಅಭ್ಯಾಸಿಗಳ ಅವಿರತ ಪ್ರಯತ್ನದಿಂದ ಗೌಹಾಟಿ ಕೇಂದ್ರದಲ್ಲಿ ಸೆಪ್ಟಂಬರ್ 3ನೇ ದಿನಾಂಕ ಚಟುವಟಿಕೆಗಳಿಂದ ಕೂಡಿದ್ದ ಪೂರ್ಣದಿನ ಕಾರ್ಯಕ್ರಮ ನಡೆಯಿತು. ಬೆಳಗಿನ ಸತ್ಸಂಗದ ನಂತರ ಸೆಪ್ಟಂಬರ್ ಸಂಚಿಕೆಯ ಎಖೋಸ್ ಇಂಡಿಯಾ ಪತ್ರಿಕೆಯ ಮುಖ್ಯಾಂಶಗಳ ಪ್ರಸ್ತುತಿ ತೋರಿಸಲಾಯಿತು. ಭೋಜನಾನಂತರ ಹೊಸ ಅಭ್ಯಾಸಿಗಳಿಗೆ ತಮ್ಮ ಸಾಧನೆಯಲ್ಲಿರಬಹುದಾದ ಸಂದೇಹಗಳಿಗಾಗಿ ಪ್ರಶ್ನೋತ್ತರ ಕಾರ್ಯಕ್ರಮವಿತ್ತು. ಕೆಲವರು ಹಳೆಯ ಅಭ್ಯಾಸಿಗಳು ಸಹ ಸಾಧನೆಯಲ್ಲಿ ತಮ್ಮ ಅನುಮಾನಗಳನ್ನು ಪರಿಹರಿಸಿಕೊಳ್ಳಬೇಕಾಗಿರುವುದು ಆನಂತರ ಕಂಡುಬಂದಿತು. ಎಸ್.ಎಮ್.ಎಸ್.ಎಫ್ ರಚಿಸಿರುವ ಸ್ಲೈಡ್‌ಗಳನ್ನು ಬಳಸಿಕೊಂಡು ನಡೆಸಿದ ಕಾರ್ಯಕ್ರಮವು ಚಿಂತನೆಯನ್ನು ಉದ್ದೀಪಿಸುವಂತಿದ್ದು ಎಲ್ಲರಿಗೂ ಉಪಯೋಗಕಾರಿಯಾಗಿತ್ತು. ಬಿಡುವಿನ ನಂತರ ವಾತಾವರಣ ತಿಳಿಗೊಳಿಸುವಂತೆ ಪ್ರಶ್ನೋತ್ತರ ಕಾರ್ಯಕ್ರಮ ನಡೆದು ಎಲ್ಲಾ ಅಭ್ಯಾಸಿಗಳು ಪಾಲ್ಗೊಂಡಿದ್ದರು. ಲಘು ಉಪಹಾರದ ನಂತರ ಸಂಜೆಯ ಸತ್ಸಂಗ 4 ಘಂಟೆಗೆ ನಡೆಯಿತು.



## ತ್ರಿಶ್ಯೂರು

4 ಸೆಪ್ಟಂಬರ್ ದಂದು ತ್ರಿಶ್ಯೂರ್ ಯೋಗಾಶ್ರಮದಲ್ಲಿ ಓಣಂ ಜತೆ ಪೂರ್ಣ ದಿನದ ಕಾರ್ಯಕ್ರಮ ಸಹ ನಡೆಯಿತು. ಗುರುಗಳ ಭಾಷಣಗಳಾದ "ಹೃದಯದಲ್ಲಿರುವ ನಿರಂತರ ಜ್ಯೋತಿ" ಮತ್ತು "ಮಾನವತೆಗಾಗಿ ಭವಿಷ್ಯದ ಬದಲಾವಣೆ" ಗಳನ್ನು ತೋರಿಸಲಾಯಿತು. ಕೇಂದ್ರ ಮುಖ್ಯಸ್ಥ ಸೋ. ಟಿ.ಪಿ ನಾರಾಯಣ ಮತ್ತು ಸೋ. ಜಯಪ್ರಕಾಶ್ ಅದನ್ನು ಅಭ್ಯಾಸಿಗಳ ಅನುಕೂಲಕ್ಕಾಗಿ ಮಲಯಾಳಂಗೆ ಅನುವಾದಿಸಿದರು. ಇತ್ತೀಚಿಗೆ ಆದ ಜಾಗತಿಕ ಸೇವಾ ಸಮಿತಿ, ಮಿಷನ್ನಿನ ಚಟುವಟಿಕೆಗಳು, ಸತ್ಪ್ರೀಲ್ ಭೇಟಿಯ ಮಹತ್ವ, ಪುನಃಶ್ಚೇತನ ಕೇಂದ್ರಗಳು ಮೊದಲಾದ ಮಾಹಿತಿಯನ್ನು ಎಲ್ಲರೊಡನೆ ಹಂಚಿಕೊಳ್ಳಲಾಯಿತು. ಅರ್ಧ ಗಂಟೆಯ ಕಾಲ ಸುವರ್ಣ ಮೌನವನ್ನು ಆಚರಿಸಲಾಯಿತು.

## ದೇವಕೋಟ್ಟೈ, ತಮಿಳುನಾಡು.



ಸುಮಾರು 81 ಅಭ್ಯಾಸಿಗಳು ತಮಿಳುನಾಡಿನ ವಿವಿಧ ಕೇಂದ್ರಗಳಾದ ರಾಮನಾಥಪುರಮ್, ಪರಮಕುಡಿ, ಮನಮದುರೈ ಮತ್ತು ಶಿವಗಂಗೈಗಳಿಂದ ಬಂದು ದೇವಕೋಟ್ಟೈ ಕೇಂದ್ರದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮವು ಬೆಳಿಗ್ಗೆ 10ಕ್ಕೆ ಮುಕ್ತ ಸಭೆಯ ಮೂಲಕ ಪ್ರಾರಂಭವಾಯಿತು. ಸೋ. ಮರಿಯಾ ಸೆಲ್ವರಾಜ್ ಸ್ವಾಗತ ಭಾಷಣ ಮಾಡಿದರು. 55 ಸ್ಥಳೀಯರು ಇದರಲ್ಲಿ ಪಾಲ್ಗೊಂಡು ಅವರಿಗೆ ಮಿಷನ್ನಿನ ಚಟುವಟಿಕೆಗಳ ಬಗ್ಗೆ ತಿಳಿಸಿಕೊಡಲಾಯಿತು. ಭಾಗವಹಿಸಿದ ಕೇಂದ್ರಗಳ ಪ್ರಶಿಕ್ಷಕರು 'ಮಾನವ ಜೀವನದ ಉದ್ದೇಶ', 'ಧರ್ಮ', 'ಗುರುಗಳ ಪಾತ್ರ', 'ಸಾಧನೆಯ ಮಹತ್ವ', 'ಅಭ್ಯಾಸಿಯ ಪಾತ್ರ', ಮತ್ತು 'ಸಹಜಮಾರ್ಗ ಧ್ಯಾನದ ಅಗತ್ಯ' ಕುರಿತು ಮಾತನಾಡಿದರು. ಮಧ್ಯಾಹ್ನದ ಅವಧಿಯಲ್ಲಿ ಎಲ್ಲಾ ಅಭ್ಯಾಸಿಗಳು ತಮ್ಮ ಅನುಭವಗಳನ್ನು ಮತ್ತೊಬ್ಬರೊಡನೆ ಹಂಚಿಕೊಂಡರು. ಕಾರ್ಯಕ್ರಮವು ಸಂಜೆಯ ಸತ್ಸಂಗದೊಡನೆ ಮುಕ್ತಾಯವಾಯಿತು.

ಸಂಪುಟ 4 ಸಂಚಿಕೆ 5 ನವೆಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ



## ಸೇವೆಯ ಮೂಲಕ ಬೆಳವಣಿಗೆ, ಮುಂಬೈ

ಮುಂಬೈಯ ಬೇರೆ ಬೇರೆ ಸ್ಥಳಗಳಲ್ಲಿ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ಗಳ ನಾಲ್ಕು ವಾರಾಂತ್ಯಗಳಲ್ಲಿ ಪೂರ್ವಾಹ್ನ 11.00 ಗಂಟೆಯಿಂದ ಅಪರಾಹ್ನ 4.00 ಗಂಟೆಯವರೆಗೆ 'ಸೇವೆಯ ಮೂಲಕ ಬೆಳವಣಿಗೆ' ಎಂಬ ವಿಷಯದ ಮೇಲೆ ಕಾರ್ಯಾಗಾರವನ್ನು ನಡೆಸಲಾಯಿತು. ಅಭ್ಯಾಸಿಗಳಿಗೆ ಸ್ಫೂರ್ತಿಕೊಡುವ, ಮಿಷನ್ನಿನಲ್ಲಿ ಸ್ವಯಂಸೇವಾ ಕಾರ್ಯಗಳ ವಿವರಗಳನ್ನು ಹಂಚಿಕೊಳ್ಳುವ, ಸೇವೆಗಾಗಿ ಸೂಕ್ತ ಮನೋಭಾವವನ್ನು ಬೆಳೆಸಿಕೊಳ್ಳುವ ಮತ್ತು ಕೆಲಸಕ್ಕಾಗಿ ಮಾರ್ಗದರ್ಶನ ಮಾಹಿತಿಯನ್ನೊದಗಿಸುವ ಗುರಿಯನ್ನಿಟ್ಟುಕೊಂಡಿದ್ದ ಈ ಕಾರ್ಯಾಗಾರಗಳಲ್ಲಿ ಪ್ರತಿಯೊಂದರಲ್ಲೂ ಸರಾಸರಿ ಇಪ್ಪತ್ತು ಮಂದಿ ಅಭ್ಯಾಸಿಗಳು ಭಾಗವಹಿಸಿದ್ದರು.

ಜಲ್‌ಗಾಂವ್‌ನಲ್ಲಿ ಸೆಪ್ಟೆಂಬರ್ 11ರಂದು ನಡೆದ ಕಾರ್ಯಕ್ರಮದಲ್ಲಿ ಜಲ್‌ಗಾಂವ್ ಮತ್ತು ಸಮೀಪದ ಕೇಂದ್ರಗಳಿಂದ ಬಂದ ಮೂವತ್ತು ಅಭ್ಯಾಸಿಗಳು ಭಾಗವಹಿಸಿದ್ದರು. ಸ್ಲೈಡ್‌ಗಳು ಇಂಗ್ಲಿಷ್‌ನಲ್ಲಿದ್ದು ಅವನ್ನು ಏಕಕಾಲಕ್ಕೆ ಹಿಂದಿ ಮತ್ತು ಮರಾಠಿಗಳಲ್ಲಿ ಹೇಳಲಾಯಿತು. ಅಭ್ಯಾಸಿಗಳು ಬಹಳ ಉತ್ಸುಕತೆಯಿಂದ ಭಾಗವಹಿಸಿದ್ದು ಕಾರ್ಯಕ್ರಮವು ಸತ್ಸಂಗದೊಂದಿಗೆ ಮುಕ್ತಾಯವಾಯಿತು.

## ಅಂತರಾಷ್ಟ್ರೀಯ ಶಾಂತಿದಿನ, ಗುಜರಾತ್

ಅಂತರಾಷ್ಟ್ರೀಯ ಶಾಂತಿದಿನವಾದ ಸೆಪ್ಟೆಂಬರ್ 21ರಂದು ಗುಜರಾತ್‌ನ 29 ಸ್ಥಳಗಳಲ್ಲಿ ಪ್ರಾರ್ಥನಾ ಸಭೆಗಳನ್ನು ಸಂಘಟಿಸಲಾಗಿದ್ದು ಅವುಗಳಲ್ಲಿ 525 ಅಭ್ಯಾಸಿಗಳು ಮತ್ತು 1600 ಅತಿಥಿಗಳು ಭಾಗವಹಿಸಿದ್ದರು.

ಜಾಮ್‌ನಗರದ ನಾಲ್ಕು ಸ್ಥಳಗಳಲ್ಲಿ ಸಭೆಯನ್ನು ಆಯೋಜಿಸಲಾಗಿದ್ದು ಅಭ್ಯಾಸಿ ಮತ್ತು ಅತಿಥಿಗಳು ಒಟ್ಟು 400 ಮಂದಿ ಭಾಗವಹಿಸಿದ್ದರು. ಭಾವನಗರದ ಸಭೆಯಲ್ಲಿ ಅಭ್ಯಾಸಿ ಮತ್ತು ಅತಿಥಿಗಳು ಒಟ್ಟು ಸೇರಿ 200 ಮಂದಿ ಮತ್ತು ಪೋರ್‌ಬಂದರ್‌ನಲ್ಲಿ 50 ಮಂದಿ ಭಾಗವಹಿಸಿದ್ದರು. ಕಾಡಿಯಲ್ಲಿ ಒಂದು ಶಾಲೆಯಲ್ಲಿ ಆಯೋಜಿಸಲಾದ ಸಭೆಯಲ್ಲಿ ಅಭ್ಯಾಸಿ ಮತ್ತು ಅತಿಥಿಗಳು 225 ಮಂದಿ ಭಾಗವಹಿಸಿದ್ದರು. ಭುಜ್ ಕೇಂದ್ರದಲ್ಲಿ ಮತ್ತು ಅದೇ ರೀತಿ ರಾಜ್‌ಕೋಟ್ ಕೇಂದ್ರದದಲ್ಲೂ 60 ಮಂದಿ ಸೇರಿದ್ದರು. ಆಮಂತ್ರಣಪತ್ರಿಕೆಯ ವಿನ್ಯಾಸ, ಭಿತ್ತಿಚಿತ್ರಗಳು, ಪ್ರಸ್ತುತಪಡಿಸಲಾಗುವ ವಿಷಯುಗಳು ಮುಂತಾದವುಗಳ ವಿನ್ಯಾಸವನ್ನು ಕಾರ್ಯಕ್ರಮಕ್ಕೆ ಹದಿನೈದು ದಿನಗಳ ಮುಂಚಿತವಾಗಿಯೇ ಮಾಡಲಾಗಿತ್ತು. ಆಮಂತ್ರಣ ಪತ್ರಿಕೆಗಳನ್ನು ಅಭ್ಯಾಸಿಗಳ ಕುಟುಂಬ ಮತ್ತು ಮಿತ್ರರಿಗೆ ಹಂಚಲಾಗಿತ್ತು. ಸಭಿಕರೆಲ್ಲರ ಅನುಕೂಲಕ್ಕಾಗಿ ವಿಶ್ವಪ್ರಾರ್ಥನೆಯನ್ನು ಫಲಕವೊಂದರಲ್ಲಿ ಗುಜರಾತಿಯಲ್ಲಿ ಪ್ರದರ್ಶಿಸಲಾಗಿತ್ತು. ಪ್ರಾರ್ಥನೆಯನ್ನು ನೆನಪಿಸಿಕೊಳ್ಳುವಲ್ಲಿ ಅದು ಸಹಕಾರಿಯಾಗಿತ್ತು.



## ಇಚ್ಛಾಶಕ್ತಿಯ ಬಳಸುವಿಕೆ, ಮುಂಬೈ

ಮುಂಬೈ ಕೇಂದ್ರದಲ್ಲಿ ಸೆಪ್ಟೆಂಬರ್ 4 ರಂದು ಇಚ್ಛಾಶಕ್ತಿಯ ಮೇಲೆ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿದ್ದು ಅದರಲ್ಲಿ 55 ಮಂದಿ ಅಭ್ಯಾಸಿಗಳು ಭಾಗವಹಿಸಿದ್ದರು. ಕಾರ್ಯಕ್ರಮವು ಸ್ವಾಗತಭಾಷಣದೊಂದಿಗೆ ಆರಂಭವಾಯಿತು. ನಂತರ ಗುರುದೇವನಿಗೊಂದು ಗೀತೆ ಮತ್ತು ಪರಿಚಯದೊಂದಿಗೆ ಮುಂದುವರಿಯಿತು. ಕಾರ್ಯಕ್ರಮವು ಇಚ್ಛಾಶಕ್ತಿಯ ಬಗ್ಗೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಗುರುಗಳ ಭಾಷಣಗಳ ಶ್ರವ್ಯ ಮತ್ತು ದೃಶ್ಯ ಪ್ರದರ್ಶನವನ್ನು ಒಳಗೊಂಡಿತ್ತು. ಭಾಗವಹಿಸಿದವರಿಗೆ ವಿಷಯದ ಬಗ್ಗೆ ಸಹಜಮಾರ್ಗದಿಂದ ಪಠ್ಯವಿಷಯವನ್ನು ಕೊಡಲಾಗಿತ್ತು. ಅಭ್ಯಾಸಿಗಳು ಇನ್ನು ಮುಂದೆ ಸಾಧನೆಯನ್ನು ಇನ್ನಷ್ಟು ಶ್ರದ್ಧೆಯಿಂದ ಮಾಡುವ ದೃಢನಿಶ್ಚಯವನ್ನು ಕೈಗೊಳ್ಳುವುದರೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

## ಹತ್ತು ನಿಯಮಗಳಿಗೆ ಗಮನ, ಗದಗ, ಉತ್ತರ ಕರ್ನಾಟಕ

ಕರ್ನಾಟಕದ ಹುಬ್ಬಳ್ಳಿಯ ಸಮೀಪದ ಗದಗಿನಲ್ಲಿ ಹತ್ತು ನಿಯಮಗಳ ಕುರಿತಾಗಿ ನಡೆದ ಪೂರ್ಣದಿನದ ಕಾರ್ಯಕ್ರಮದಲ್ಲಿ 53 ಅಭ್ಯಾಸಿಗಳು ಭಾಗವಹಿಸಿದ್ದರು. ಬೆಳಗ್ಗಿನ ಸತ್ಸಂಗದೊಂದಿಗೆ ಕಾರ್ಯಕ್ರಮವು ಆರಂಭವಾಯಿತು. ಹತ್ತುನಿಯಮಗಳಿಗನುಗುಣವಾಗಿ ನಮ್ಮ ಜೀವನವನ್ನು ಸಮತೋಲಿತ ರೀತಿಯಲ್ಲಿ ನಡೆಸುವ ಮೂಲಕ ಚಾರಿತ್ರ್ಯನಿರ್ಮಾಣದ ಮಹತ್ವಕ್ಕೆ ಒತ್ತುಕೊಡಲಾಯಿತು. ಪ್ರತಿಯೊಂದು ನಿಯಮವನ್ನು ನಮ್ಮ ಗುರುಗಳ ಜೀವನದ ಉದಾಹರಣೆಗಳೊಂದಿಗೆ ವಿವರಿಸಲಾಯಿತು. ಮಧ್ಯಾಹ್ನದ ಊಟದ ಬಳಿಕ ಮಕ್ಕಳು ಹಾಡೊಂದನ್ನು ಹಾಡಿದರು. ಕೆಲ ಕರಕುಶಲ ವಸ್ತುಗಳನ್ನು ಪ್ರದರ್ಶಿಸಲಾಯಿತು. ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು..



ಸಂಪುಟ 4 ಸಂಚಿಕೆ 5 ನವೆಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ ವಾರ್ತಾಪತ್ರ



## ರಾಜಸ್ಥಾನ– ಯುವಜನತೆಗಾಗಿ ಪರಿಜ್ಞಾನ ಕಾರ್ಯಕ್ರಮಗಳು

ರಾಜಸ್ಥಾನ ವಲಯದ ಯುವ ಅಭ್ಯಾಸಿಗಳಿಗಾಗಿ ಸೆಪ್ಟೆಂಬರ್ 4ರಂದು ಜಯಪುರದಲ್ಲಿ ಪರಿಜ್ಞಾನ ಕಾರ್ಯಾಗಾರವೊಂದನ್ನು ನಡೆಸಲಾಯಿತು. ವಿವಿಧ ಕೇಂದ್ರಗಳಿಂದ ಸುಮಾರು 70 ಯುವಜನರು ಭಾಗವಹಿಸಿದರು. ನೇಮಿತರಾದ ಸಂಯೋಜಕರು ಈ ಕೆಳಗಿನ ವಿಷಯಗಳನ್ನು ಪ್ರಸ್ತುತಪಡಿಸಿದರು.

- ಸಹಜಮಾರ್ಗದ ಸರಿಯಾದ ತಿಳುವಳಿಕೆ ಎಂದರೇನು? ಮತ್ತು ಅದನ್ನು ಯುವಜನತೆ ಹೇಗೆ ಬೆಳೆಸಿಕೊಳ್ಳುವುದು?
- ಯುವ ಸಂಯೋಜಕರಾಗಿ ನೀವು ನಿಮ್ಮ ಕೇಂದ್ರದಲ್ಲಿ ಯಾವೆಲ್ಲ ಯುವ ಚಟುವಟಿಕೆಗಳನ್ನು ಸಂಘಟಿಸುತ್ತೀರಿ?
- ಸಹಜಮಾರ್ಗ ಜಾಲತಾಣದ ಸಂಪನ್ಮೂಲಗಳು
- ಖರಗಪುರ ಕ್ರೆಸ್ಟ್ ಮತ್ತು ಬೆಂಗಳೂರಿನ ಯುವ ವಿಚಾರಗೋಷ್ಠಿಗಳ ಬಗ್ಗೆ ಅರಿವು

ಈ ಕಾರ್ಯಾಗಾರದ ಮುಖ್ಯ ಉದ್ದೇಶವು ವಿವಿಧ ಕೇಂದ್ರಗಳ ಯುವಜನತೆಯನ್ನು ಒಂದು ಸಾಮಾನ್ಯ ವೇದಿಕೆಯಲ್ಲಿ ತಂದು ಅವರಿಗೆ ಪರಸ್ಪರ ಕಲೆಯುವ, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮತ್ತು ಭ್ರಾತೃತ್ವಭಾವನೆಯನ್ನು ಬೆಳೆಸಿಕೊಳ್ಳುವ ಒಂದು ಅವಕಾಶವನ್ನು ಒದಗಿಸುವುದಾಗಿತ್ತು. ಆಯ್ದುಕೊಂಡ ವಿಧಾನವು, ಕೇಂದ್ರಗಳಲ್ಲಿನ ವಿವಿಧ ಚಟುವಟಿಕೆಗಳ ಅನುಭವಗಳನ್ನು ಹಂಚಿಕೊಳ್ಳುವುದು, ಪ್ರಶ್ನೋತ್ತರಾವಧಿ ಮತ್ತು ಸಂಬಂಧಿತ ವೀಡಿಯೊ ಪ್ರದರ್ಶನ ಆಗಿತ್ತು. ಸಾಯಂಕಾಲ 'ಜೀವನ ಅವಕಾಶಗಳು' ಎಂಬ ಹೆಸರಿನ ಚಟುವಟಿಕೆಯೊಂದನ್ನು ನಡೆಸಿದ್ದು, ಅದರ ಮೂಲಕ ಅವರು ತಮ್ಮ ಜೀವನವನ್ನು ಕುಟುಂಬ, ಉದ್ಯೋಗ, ಮಿಷನ್ ಮತ್ತು ವ್ಯಕ್ತಿಗತ ಎಂಬ ನಾಲ್ಕು ಅವಕಾಶಗಳಲ್ಲಿ ನಿರ್ವಹಿಸುವುದು ಹೇಗೆ ಎಂಬುದನ್ನು ಕಲಿತರು. ಸಾಯಂಕಾಲದ ಸತ್ಸಂಗದೊಂದಿಗೆ ವಿಚಾರಗೋಷ್ಠಿಯು ಮುಕ್ತಾಯವಾಯಿತು.

ಭಿಲ್ವಾರದಲ್ಲಿ ಅಕ್ಟೋಬರ್ 9 ರಂದು 'ಸಹಜಮಾರ್ಗದ ಸರಿಯಾದ ತಿಳುವಳಿಕೆ ಎಂದರೇನು ಮತ್ತು ಯುವಜನತೆ ಅದನ್ನು ಬೆಳೆಸಿಕೊಳ್ಳುವುದು ಹೇಗೆ?' ಎಂಬ ವಿಷಯದ ಮೇಲೆ ಯುವಸಭೆಯೊಂದು ಎರಡುಗಂಟೆಗಳ ಕಾಲ ನಡೆಯಿತು. ಭಾಗವಹಿಸಿದ ಹತ್ತುಮಂದಿ ಅಭ್ಯಾಸಿಗಳು ವಿಷಯದ ಮೇಲೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಅಜ್ಮೀರ್‌ನಲ್ಲಿ ಯುವ ಸಂಯೋಜಕರಾದ ಡಾ. ಸನ್ನಿಯವರು, ಆಗಸ್ಟ್ 20–22 ರ ಅವಧಿಯಲ್ಲಿ 'ಸ್ವ ಪರಿವರ್ತನೆ' ಎಂಬ ವಿಷಯದ ಮೇಲೆ ಮೂರುದಿನಗಳ ಕಾರ್ಯಾಗಾರವೊಂದನ್ನು ಸಂಘಟಿಸಿದರು. ಪ್ರಶಿಕ್ಷಕರಾದ ಡಾ. ವಿಕಾಸ್ ಅದನ್ನು ಒಂದು ಕೌಟುಂಬಿಕ ಪರಿಸರದಲ್ಲಿ ಸುಗಮಗೊಳಿಸಿದರು. ಪ್ರತಿದಿನವೂ ಸತ್ಸಂಗದೊಂದಿಗೆ ಆರಂಭ ಮತ್ತು ಕೊನೆಗಾಣುತ್ತಿತ್ತು.

ಆರಂಭಿಕ ಸಂಕೋಚನಿವಾರಣೆಯ ನಂತರ, 'ಇತರರದೇನು ತಪ್ಪು ಮತ್ತು ನನ್ನದೇನು ತಪ್ಪು?' ಎಂಬುದರ ಬಗೆಗಿನ ಅಂತರಾವಲೋಕನವು, ಭಾಗವಹಿಸಿದವರಿಗೆ ಸಮಸ್ಯೆಯು ಹೊರಗೆ ಇಲ್ಲ, ಬದಲಾಗಿ ನಮ್ಮೊಳಗೇ ಇದೆ ಎಂಬ ಅರಿವು ಉಂಟಾಗುವಂತೆ ಮಾಡಿತು. ಆ ವ್ಯಕ್ತಿಯು ತಾನು ಈ ಮೊದಲು ಗ್ರಹಿಸಿರದ ಅನೇಕ ಹೊಸ ಗುಣಗಳನ್ನೂ ಅದು ಬಯಲುಮಾಡಿತು. ಅವರ ಹೃದಯಗಳು ತೆರೆದುಕೊಂಡು ಪರಿಹಾರಗಳು ಅಂತರ್ಯದಿಂದ ಸ್ಫುರಿಸಲಾರಂಭಿಸಿದವು. ದಿನಚರಿ ಬರವಣಿಗೆಯ ಮೇಲಿನ ಅವಧಿ ಮತ್ತು 'ಗುರಿಯನ್ನು ತಲುಪುವುದು ಹೇಗೆ?' ಮತ್ತು 'ಆಧ್ಯಾತ್ಮಿಕ ಜೀವನವನ್ನು ಆಯ್ದುಕೊಳ್ಳುವುದು' ಎಂಬ ವಿಷಯಗಳ ಮೇಲಿನ ಚರ್ಚೆಗಳು ಸಾಧನೆಯ ಮೇಲೆ ಗಮನವನ್ನು ಪ್ರತಿಪಾದಿಸಿದವು. ತಮ್ಮ ಸೋದರ, ಸೋದರಿಯರನ್ನು ಅರಿಯುವುದು, ಅದಕ್ಕಿಂತಲೂ ಮುಖ್ಯವಾಗಿ ತಮ್ಮನ್ನೇ ಇನ್ನಷ್ಟು ಚೆನ್ನಾಗಿ ಅರಿತುಕೊಳ್ಳಲು ಈ ಕಾರ್ಯಾಗಾರವು ಸಹಾಯ ಮಾಡಿತು.

## ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮ, ತಿಪಟೂರು, ಕರ್ನಾಟಕ

ತಿಪಟೂರಿನಲ್ಲಿ ಕರ್ನಾಟಕ ದಕ್ಷಿಣ ವಲಯದ 37 ಅಭ್ಯಾಸಿಗಳಿಗೆ ಎರಡು ದಿನಗಳ, 'ಸ್ಪಂದನ: ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮ' ಎಂಬ ಸನಿವಾಸ ಕಾರ್ಯಾಗಾರವೊಂದು ಸೆಪ್ಟೆಂಬರ್ 24–25 ರಂದು ನಡೆಯಿತು. ಸಹಜಮಾರ್ಗ ಅಭ್ಯಾಸ ಮತ್ತು ತತ್ತ್ವಗಳನ್ನು ದುರ್ಬಲಗೊಳಿಸದೆ ತಿಳಿಸಲು ಮಿಷನಿನ ರಾಯಭಾರಿಗಳಂತೆ ಬೆಳೆಯಲು ಅಭ್ಯಾಸಿಗಳನ್ನು ಸನ್ನದ್ಧರಾಗಿಸುವ ಗುರಿಯನ್ನು ಈ ಕಾರ್ಯಾಗಾರವು ಹೊಂದಿತ್ತು. ಅನುಭವಿ ತರಬೇತುಗಾರರಿಂದ 'ಪರಿಣಾಮಕಾರಿ ಸಂವಹನ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು', 'ಆಧ್ಯಾತ್ಮಿಕ ಆಕಾಂಕ್ಷಿಗಳಿಗೆ ಸಹಜಮಾರ್ಗವನ್ನು ಪರಿಚಯಿಸುವಾಗ ಒಳಗೊಂಡಿರಬೇಕಾದ ಅತ್ಯಂತ ಪ್ರಶಸ್ತವಾದ ವಿಷಯಗಳು', 'ವಿವಿಧ ಸನ್ನಿವೇಶಗಳಲ್ಲಿ ಸಹಜಮಾರ್ಗವನ್ನು ಪರಿಚಯಿಸುವುದು', ಕಾರ್ಯನಿರ್ವಾಹಕನಾಗಿ ಬೆಳೆಯಲು ನಿರಂತರ ಸ್ವಯಂ ಬೆಳವಣಿಗೆಯ ಅಗತ್ಯ' ಎಂಬ ವಿಷಯಗಳ ಮೇಲೆ ಅಧಿವೇಶನಗಳು ನಡೆಸಲ್ಪಟ್ಟವು. ತರಬೇತಿದಾರರಿಂದ ವಿಷಯಾಂಶಗಳನ್ನು ಪಡೆಯುತ್ತಿರುವಾಗ ಭಾಗವಹಿಸಿದವರಿಗೆ ಗುಂಪುಗಳೊಳಗೆ ಅಭ್ಯಾಸಾವಧಿಗಳಿದ್ದವು. ಭಾಗವಹಿಸಿದ ಕೆಲವರು ಪೂರ್ವದತ್ತ ವಿಷಯಗಳ ನಿರೂಪಣೆಯನ್ನು ಮಾಡಿ ತಮ್ಮ ಸಾಮರ್ಥ್ಯ ಮತ್ತು ಸುಧಾರಣಾ ಕ್ಷೇತ್ರಗಳ ಬಗ್ಗೆ ತಜ್ಞರ ತಂಡದಿಂದ ಹಿಮ್ಮಾಹಿತಿಯನ್ನು ಪಡೆದರು. ಭಾಗಿಗಳಿಗೆ ಮಿಷನಿನಲ್ಲಿ ವಿವಿಧ ಕಾರ್ಯ ನಿರ್ವಾಹಣಾ ಅವಕಾಶಗಳನ್ನು ಪರಿಚಯಿಸಲಾಯಿತು. ತಂತಮ್ಮ ಕೇಂದ್ರಗಳಲ್ಲಿ ಕೇಂದ್ರಪದಾಧಿಕಾರಿಗಳೊಡನೆ ಚರ್ಚಿಸಿದ ನಂತರ ಚಟುವಟಿಕೆಗಳನ್ನು ಯೋಜಿಸಲು ಸಲಹೆ ನೀಡಲಾಯಿತು.
ಈ ಕಾರ್ಯಾಗಾರವು ಸಹಜಮಾರ್ಗವನ್ನು ಪಸರಿಸಲು ತಮಗೆ ಆತ್ಮವಿಶ್ವಾಸವನ್ನು ಕೊಟ್ಟಿದ್ದು ತುಂಬ ಫಲದಾಯಕವಾಗಿತ್ತೆಂಬುದನ್ನು ಅಭ್ಯಾಸಿಗಳು ಕಂಡುಕೊಂಡರು. ಅವರಲ್ಲಿ ಹೆಚ್ಚಿನವರು ಗುರುಗಳ ಕಾರ್ಯದಲ್ಲಿ ಪಾಲ್ಗೊಳ್ಳಲು ನವೋತ್ಸಾಹ ಮತ್ತು ಹುಮ್ಮಸ್ಸುಗಳೊಡನೆ ತಮ್ಮ ಕೇಂದ್ರಗಳಿಗೆ ಮರಳಿದರು.










## ಮಕ್ಕಳಿಗಾಗಿ ಕಾರ್ಯಶಾಲೆ, ಚೆನ್ನೈ

ಅಕ್ಟೋಬರ್ 9 ರಂದು 8 ರಿಂದ 12ವರ್ಷದ ವಯಸ್ಸಿನ ಮಕ್ಕಳಿಗಾಗಿ ಕರಕುಶಲ ಕಾರ್ಯಶಾಲೆಯೊಂದನ್ನು ಆಯೋಜಿಸಲಾಗಿದ್ದು ಅದರಲ್ಲಿ ಸುಮಾರು 90 ಮಕ್ಕಳು ಅತ್ಯುತ್ಸಾಹದಿಂದ ಪಾಲ್ಗೊಂಡರು.

ಮಕ್ಕಳು ದೀಪಾವಳಿಯ ಕಾರ್ಡುಗಳು, ಫೋಟೊಕಟ್ಟುಗಳು, ಭಿತ್ತಿಚಿತ್ರಗಳು, ಹುಟ್ಟುಹಬ್ಬದ ಟೊಪ್ಪಿಗೆಗಳು, ಬಣ್ಣದ ಕನ್ನಡಕಗಳು ಮುಂತಾದ ವಸ್ತುಗಳನ್ನು ಎಲ್ಲಾ ಬಹುತೇಕ ನಿರುಪಯುಕ್ತ ವಸ್ತುಗಳಿಂದ ತಯಾರಿಸಿದರು. ಅವರು ಸ್ಫೂರ್ತಿದಾಯಕ ಉಕ್ತಿಗಳನ್ನು, ಸುಂದರವಾದ ಚಿತ್ರಗಳನ್ನು ಟೀ–ಶರ್ಟ್ ಗಳ ಮೇಲೆ ಚಿತ್ರಿಸಿದರು. ಅವರು ಸ್ವಂತ ಕಲ್ಪನೆಯಿಂದ ಉದ್ಬೋಧಕ ಚಿತ್ರಗಳನ್ನು ಕೈಚೀಲಗಳ ಮೇಲೆ ಚಿತ್ರಿಸಿ, ನಿಸರ್ಗ ಸಂರಕ್ಷಣೆಗಾಗಿ ಪಾಲಿಥಿನ್‌ಗಳ ಉಪಯೋಗವನ್ನು ತಡೆಯಲು ಸಂದೇಶವನ್ನು ಕೊಂಡೊಯ್ದರು. ಮಕ್ಕಳು ಮೋಜು ಮಾಡುತ್ತಲೇ, ಮೌಲ್ಯಗಳನ್ನು ಕಲಿತುಕೊಂಡುದುದಕ್ಕಾಗಿ ಸಂತೋಷ ಪಟ್ಟರು.

## ನೂತನ ಕೇಂದ್ರ, ತಮಿಳುನಾಡು

ಆಗಸ್ಟ 28ರಂದು ತಿರುಪ್ಪೂರಿನ ಹತ್ತಿರದ ಕರುಮತಂಪಟ್ಟಿ ಎಂಬಲ್ಲಿ ನೂತನ ಕೇಂದ್ರವೊಂದನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದ ಪ್ರಾರಂಭ ಬೆಳಗಿನ ಸತ್ಸಂಗದೊಂದಿಗೆ ಆಯಿತು.

ಸೋ. ಟಿ.ವಿ.ವಿಶ್ವನಾಥರಾವ್ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ತಿರುಪ್ಪೂರ್ ಕೇಂದ್ರವನ್ನು

ಬೆಳೆಸುವಲ್ಲಿ ಅಭ್ಯಾಸಿಗಳು ಮಾಡಿದ ಪ್ರಯತ್ನಗಳನ್ನು ನೆನೆಸಿಕೊಂಡು, ಈ ಕೇಂದ್ರವನ್ನು ಬೆಳೆಸಲು ಸಮರ್ಪಣಾ ಭಾವದಿಂದ ಕೆಲಸಮಾಡಿ ಇನ್ನೂ ಹೆಚ್ಚು ಹೆಚ್ಚಿನ ಕೇಂದ್ರಗಳನ್ನು ಪ್ರಾರಂಭಿಸಲು ದಾರಿಮಾಡಿಕೊಡಲು ಅಭ್ಯಾಸಿಗಳಿಗೆ ವಿನಂತಿಸಿದರು. ನಂತರ ಬಹಿರಂಗ ಸಭೆಯೊಂದನ್ನು ಆಯೋಜಿಸಿ ಸಹಜಮಾರ್ಗದ ವೈಶಿಷ್ಟ್ಯ ವಿವರಿಸಿದ ಫಲವಾಗಿ ಅಲ್ಲಿ ಪಾಲ್ಗೊಂಡವರಲ್ಲಿ ಅನೇಕರು ಸಾಧನೆಯನ್ನು ಪ್ರಾರಂಭಿಸುವಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸಿದರು.

## ನೂತನ ಧ್ಯಾನಮಂದಿರ, ನೈನಿತಾಲ(ಉತ್ತರಾಖಂಡ)

ಬಹುದಿನಗಳ ಸ್ವಪ್ನವಾಗಿದ್ದ ಆವಶ್ಯಕತೆಯೊಂದರ ಉದ್ಘಾಟನೆಯನ್ನು 4ನೇ ಸೆಪ್ಟೆಂಬರ್‌ರಂದು ನೈನಿತಾಲದಲ್ಲಿ ನೆರವೇರಿಸಲಾಯಿತು. ಸುಮಾರು 150 ಜನ ಕೂಡಲು ಅವಕಾಶವಿದ್ದ ಈ ಧ್ಯಾನಮಂದಿರವು ಒಬ್ಬ ಅಭ್ಯಾಸಿ ಬಂಧುವಿನ ಮನೆಯ ಮಹಡಿಯ ಮೇಲಿದೆ. ಈ ಅವಸರದಲ್ಲಿ ಸಂಪೂರ್ಣದಿನ ಆಚರಿಸಲಾದ ಕಾರ್ಯಕ್ರಮವು ಹಾಡುಗಳು, ಪದ್ಯವಾಚನ, ಮಕ್ಕಳಿಂದ ಭಜನೆ ಹಾಗು ಉತ್ಸಾಹಪೂರಿತ ಭಾಷಣಗಳಿಂದ ಕೂಡಿತ್ತು. ಈ ಧ್ಯಾನಮಂದಿರದ ಸಮರ್ಪಣೆಯಿಂದ ಸ್ಥಳೀಯ ಅಭ್ಯಾಸಿಗಳಲ್ಲಿ ಸ್ಫೂರ್ತಿಯನ್ನುಂಟುಮಾಡಿತು.

## ಚಾರಿತ್ರ್ಯನಿರ್ಮಾಣ, ತಿರುಪ್ಪೂರ್

14–15 ಆಗಸ್ಟ್ ರಂದು, ತಿರುಪ್ಪೂರಿನ ಚೆಟ್ಟಿಪಾಲಾಯಮ ಯೋಗಾಶ್ರಮದಲ್ಲಿ ಸಹೋದರ ರವಿ ಸುಬ್ಬಿಯನ್ ರವರಿಂದ ವಿಶೇಷ ವಿನಂತಿಯ ಮೇರೆಗೆ ಯುವ ಅಭ್ಯಾಸಿಗಳ ಪುಟ್ಟ ಗುಂಪಿಗಾಗಿ ಚಾರಿತ್ರ್ಯ ನಿರ್ಮಾಣದ ಬಗ್ಗೆ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಯಿತು.

14ರಂದು ರವಿವಾರದ ಸತ್ಸಂಗದನಂತರ, ಸ್ವ–ಪರೀಕ್ಷಣೆ ಯೊಂದಿಗೆ ಕಾರ್ಯಕ್ರಮದ ಪ್ರಾರಂಭವಾಯಿತು. ಅಭ್ಯರ್ಥಿಗಳಿಗೆ ತಮ್ಮ ಆತ್ಮಪರೀಕ್ಷಣೆಗಾಗಿ 13 ಪ್ರಶ್ನೆಗಳನ್ನು ಕೊಟ್ಟು, ತಾವು ಈವರೆಗೆ ತಮ್ಮ ಚಾರಿತ್ರ್ಯ ನಿರ್ಮಾಣಕ್ಕಾಗಿ ಮಾಡಿದ ಪ್ರಯತ್ನಗಳ ಬಗ್ಗೆ ಬರೆಯಲು ಹೇಳಲಾಯಿತು.

ಈ ವಿಷಯಕ್ಕೆ ಸಂಬಧಿಸಿದ ಪೂಜ್ಯ ಗುರುಗಳ ಅವತರಣ ಹಾಗು ದಿವ್ಯಲೋಕದಿಂದ ಪಿಸುಮಾತುಗಳಲ್ಲಿಂಯು ಸಂದೇಶಗಳನ್ನು ಅಳವಡಿಸಿಕೊಳ್ಳಲಾಯಿತು. ಇದರಿಂದ, ಚಾರಿತ್ರ್ಯವು ಕೇವಲ ಪ್ರಾಮಾಣಿಕ ಹಾಗೂ ಸತ್ಯವಂತನಾಗಿರುವುದಷ್ಟೇ ಅಲ್ಲದೆ ಇದು ಸಂಪೂರ್ಣ ಮಾನವನಾಗಲು ಎಲ್ಲಾ ಪ್ರಸಂಗಗಳಲ್ಲಿಯೂ ಬಳಸಿಕೊಳ್ಳಬಹುದಾದ ಒಂದು ಮೂಲ ಸಿದ್ಧಾಂತಗಳ ಸಂಚೇ ಆಗಿದೆ ಎಂಬ ತಿಳುವಳಿಕೆಯಾಯಿತು. ನಮ್ಮ ಬಾಹ್ಯ ವ್ಯಕ್ತಿತ್ವವು, ನಮ್ಮ ಗುರುಗಳು ದಯಪಾಲಿಸಿದ ಆಂತರಿಕ ಆಧ್ಯಾತ್ಮಿಕ ಸ್ಥಿತಿಗೆ ಅನುಗುಣವಾಗಿರಬೇಕೆಂಬುದನ್ನು ವಿವರಿಸಲಾಯಿತು.



15 ರಂದು ಚಾರಿತ್ರ್ಯ ನಿರ್ಮಾಣಕ್ಕಾಗಿ ಆವಶ್ಯಕ ಸಾಧನಗಳಾವುವು ಹಾಗೂ ನಮ್ಮ ಮನೋಬಲವು ನಿಷ್ಫಲವಾಗುವುದೇಕೆ ಎಂಬುದರ ಬಗ್ಗೆ ಚರ್ಚಿಸಲಾಯಿತು. ನಂತರದ ಸತ್ರವು ಸ್ವ–ಪರೀಕ್ಷಣೆಯದಾಗಿತ್ತು. ಪ್ರತಿಯೊಬ್ಬರೂ ತಮ್ಮ ನ್ಯೂನ್ಯತೆಗಳ ಪರೀಕ್ಷಣೆ ಮಾಡಿಕೊಳ್ಳುವಾಗಿನ ಮೋಜನ್ನು ಅನುಭವಿಸಿದರು. ಇದು ಗುರುಗಳ ನಿರೀಕ್ಷೆಯ ಮೇರೆಗೆ ತಾವು ಹೇಗೆ ಬದಲಾಗಬೇಕೆಂಬುದರ ಬಗ್ಗೆ ಕಲ್ಪನೆಯನ್ನು ನೀಡಿತು.

ಸಹಭಾಗಿಗಳೆಲ್ಲರೂ ಆನಂದಿತರಾಗಿಯೂ ಆತ್ಮವಿಶ್ವಾಸಹೊಂದಿದವರಾಗಿಯೂ ಆಗಿ, ಈ ಕಾರ್ಯಕ್ರಮದಲ್ಲಿ ತಾವು ಕಲಿತುಕೊಂಡ ವಿಷಯಗಳನ್ನು ಪ್ರಯತ್ನಿಸಿ ನೋಡಲು ಆತುರರಾಗಿದ್ದರು.


ಸಂಪುಟ 4 ಸಂಚಿಕೆ 5 ನವೆಂಬರ್ 2011
ಶ್ರೀ ರಾಮಚಂದ್ರ ಮಿಷನ್
ಎಕ್ರೋಸ್ ಇಂಡಿಯ ವಾರ್ತಾಪತ್ರ

# Centre of Light

## ಮೈಸೂರು ಆಶ್ರಮ(ದಕ್ಷಿಣ ಕರ್ನಾಟಕ)





ಮೈಸೂರು ಆಶ್ರಮವು ನೆರೆ ಕೇಂದ್ರ ಗಳಾದ ನಂಜನಗೂಡು, ಟಿ. ನರಸಿಪುರ, ಹುಣಸೂರು, ಮಂಡ್ಯ, ಮಡಿಕೇರಿ ಮತ್ತು ಪಿರಿಯಾಪಟ್ಟಣಗಳಿಗೆ ಪ್ರಾದೇಶಿಕ ಆಶ್ರಮವಾಗಿದೆ. ಐಡಿ ಕಾರ್ಡುಗಳ ಉಸ್ತುವಾರಿ, ಪ್ರಕಾಶನಗಳ ವಿತರಣೆ ಮುಂತಾದ ಕೆಲಸಗಳನ್ನು ಈ ಕೇಂದ್ರಗಳಿಗಾಗಿ ಕೈಗೊಳ್ಳಲಾಗುತ್ತದೆ. ಈ ಆಶ್ರಮವನ್ನು ಪ್ರಾದೇಶಿಕ ಒಕ್ಕೂಟಗಳಿಗೆ, ಅಭ್ಯಾಸಿಗಳಿಗಾಗಿ ಕಾರ್ಯಾಗಾರಗಳು ಹಾಗೂ ಪ್ರಶಿಕ್ಷಣ ಕಾರ್ಯಕ್ರಮಗಳಿಗಾಗಿ ಉಪಯೋಗಿಸಲಾಗುತ್ತದೆ.

### ಗುರುಗಳ ಭೇಟಿ

ಮೈಸೂರು ಕೇಂದ್ರವು 1950 ರ ದಶಕದಲ್ಲಿ ಪ್ರಾರಂಭವಾಯಿತು. 1965ನೇ ಡಿಸೆಂಬರ್ ನಲ್ಲಿ ಪೂಜ್ಯ ಬಾಬೂಜಿ ಮಹಾರಾಜರು ಮೈಸೂರು ಕೇಂದ್ರಕ್ಕೆ ಭೇಟಿ ನೀಡಿ, ಶ್ರೀ ಮಂಜುನಾಥ ಅಯ್ಯರ್ ಅವರ ಮನೆಯಲ್ಲಿ ತಂಗಿದ್ದರು. 1985ನೇ ಮಾರ್ಚ್ 10ರಂದು ಗೋವಿಂದರಾವ ಮೆಮೋರಿಯಲ್ ಹಾಲ್‌ನಲ್ಲಿ ಜರುಗಿದ ಸಂಸ್ಥಾಪಕರ ದಿನದ ಸಮಾರಂಭವನ್ನು ಆಚರಿಸಲು ಪೂಜ್ಯ ಗುರುಗಳು ಆಗಮಿಸಿದ್ದರು. ಮತ್ತೊಮ್ಮೆ, 1995ರ ಮೇ ತಿಂಗಳ 17–18 ನೇ ದಿನದಂದು ಮೈಸೂರಿನಲ್ಲಿದ್ದು ಮುಲಕಂಡು ಭವನದಲ್ಲಿ ಸತ್ಸಂಗವನ್ನು ನೆರವೇರಿಸಿದರು.

2002 ನೇ ಸಾಲಿನಲ್ಲಿ ಯಲ್ವಾಲಾದ ಹತ್ತಿರದ ಮೈದನಹಳ್ಳಿ ಮಾರ್ಗದಲ್ಲಿ ಸುಮಾರು 16 ಎಕರೆ ಜಮೀನನ್ನು ಪ್ರಾಪ್ತ ಮಾಡಲಾಗಿ ಅದರಲ್ಲಿಯ ಎಂಟು ಎಕರೆ ಜಮೀನನ್ನು ಆಶ್ರಮಕ್ಕಾಗಿ ಮತ್ತು ಎಂಟು ಎಕರೆ ಅಭ್ಯಾಸಿಗಳ ವಸತಿಗಾಗಿ ಕೊಡಲಾಯಿತು. 2 ನೇ ಎಪ್ರಿಲ್ 2002 ರಂದು ಗುರುಗಳು ಈ ಜಮೀನನ್ನು ಮಿಷನ್ನಿಗೆ ಸಮರ್ಪಿಸಿದರು ಇನ್ನೊಂದು 3 ಎಕರೆ 32 ಗುಂಟೆ ಜಾಗವನ್ನು 2005 ರಲ್ಲಿ ಪ್ರಾಪ್ತ ಮಾಡಲಾಯಿತು.

ತದನಂತರ ತಾತ್ಪೂರ್ತಿ ಧ್ಯಾನಮಂದಿರ, ಅಡುಗೆಯ ಸಂಕುಲ ಹಾಗು ಕಾರ್ಯಾಲಯಕ್ಕಾಗಿ ಒಂದು ಕೋಣೆ ಗಳನ್ನು ಕಟ್ಟಲಾಯಿತು.

16 ನೇ ಫೆಬ್ರುವರಿ 2004 ರಂದು ಇವುಗಳನ್ನು ಉದ್ಘಾಟಿಸುವಾಗ ಸುಮಾರು ಒಂದು ಸಾವಿರ ಅಭ್ಯಾಸಿಗಳನ್ನು ಉದ್ದೇಶಿಸಿ ಗುರುಗಳು, ಹಿರಿಯ ಹಾಗು ಯುವಪೀಳಿಗೆಯ ಮಹತ್ವವನ್ನು ತಿಳಿಸಿ, "ನಮಗೆ ತಮ್ಮ ಬುದ್ಧಿವಂತಿಕೆ ಅನುಭವಗಳಿಗಾಗಿ ಹಿರಿಯರು, ಹಾಗೂ ತಮ್ಮ ಶಕ್ತಿ, ಧ್ಯೇಯವಾದ ಹಾಗೂ ತಾವು ಮಾಡಬೇಕೆಂದುದನ್ನು ಮಾಡುವ ಕ್ಷಮತೆಗಳಿಗಾಗಿ ಯುವಕರು ಬೇಕು. ಹಿರಿಯರು ವಿಚಾರ ಮಾಡಿ ಮಾತಾಡುತ್ತಾರೆ, ಯುವಕರು ಕೆಲಸಮಾಡಬೇಕು" ಎಂದರು.

ಅಕ್ಟೋಬರ್ 2004 ರಲ್ಲಿ ಯುವಸಭೆಯ ವೇಳೆಗೆ ಗುರುಗಳು ಮೈಸೂರಿಗೆ ಭೇಟಿ ನೀಡಿದರು. ಗುರುಗಳು ಯುವಕರನ್ನುದ್ದೇಶಿಸಿ ಮಾತನಾಡಿ, ಬಾಬೂಜಿಯವರು ನಮಗೆ ಮೊದಲನೇಯ ಬೈಠಕನ್ನು ಕೊಟ್ಟಾಗ, ಅದನ್ನವರು "ಬೀಜಾರೋಪಣ" ಎಂದೆನ್ನುತ್ತಾರೆ. ಅವರು ತಮ್ಮದೇ ಆದ ಬೀಜವನ್ನು ನಮ್ಮ ಹೃದಯಗಳಲ್ಲಿ ನೆಡುತ್ತಾರೆ. ಆದುದರಿಂದ ಯೋಗಭಾಷೆಯಲ್ಲಿ ಹೃದಯಕ್ಕೆ "ಹೃದಯಯೋನಿ" ಎಂದೆನ್ನಲಾಗುತ್ತದೆ. ಒಂದು ವೇಳೆ ನೀವು ಇದನ್ನು ಅಂಕುರಿಸಲು ಬಿಟ್ಟರೆ, ಭಕ್ತಿ, ಶ್ರದ್ಧೆ ಮತ್ತು ಧ್ಯಾನ ಗಳಿಂದ ನೀರೆರೆದಾಗ ನಿಮ್ಮಲ್ಲಿ ನೀವೇ ಪುನರ್ಜನ್ಮವನ್ನು ತಾಳಿ ಹೊಸ ಅಸ್ತಿತ್ವವನ್ನು ಪಡೆಯುವಿರಿ. ಇದೊಂದು ಹೊಸ ಜೀವನದ ಉತ್ಪತ್ತಿ.

ಪೂಜ್ಯ ಗುರುಗಳಿಗಾಗಿ ಧ್ಯಾನಮಂದಿರದ ಹಿಂಭಾಗದಲ್ಲಿ ಕುಟೀರವನ್ನು ಕಟ್ಟಲಾಯಿತು. ಡಿಸೆಂಬರ್ 2006 ರಲ್ಲಿ ಗುರುಗಳು ಈ ಆಶ್ರಮಕ್ಕೆ ಸಂಕ್ಷಿಪ್ತ ಭೇಟಿಯನ್ನು ನೀಡಿ ಕೆಲ ಘಂಟೆಗಳ ಕಾಲ ವಾಸ್ತವ್ಯಮಾಡಿದರು.

### ಇಂದಿನ ಆಶ್ರಮ

ಮೈಸೂರಿನಲ್ಲಿ 500 ಕ್ಕೂ ಹೆಚ್ಚು ಅಭ್ಯಾಸಿಗಳ ಸಂಖ್ಯೆ ಇದ್ದು ರವಿವಾರದ ಸತ್ಸಂಗಗಳಲ್ಲಿ ಸುಮಾರು 150 ಜನ ಹಾಜರಿರುತ್ತಾರೆ. ಸುಮಾರು 1000 ಅಭ್ಯಾಸಿಗಳು ಕೂಡಲು ಅವಕಾಶವಾಗುವಷ್ಟು ಧ್ಯಾನಮಂದಿರವನ್ನು ಕಟ್ಟುವ ಸಿದ್ಧತೆಗಳು ನಡೆದಿವೆ. ಮಾವು, ಪಪ್ಪಾಯಿ, ಸೀಬೆ ಮುಂತಾದ ಸುಮಾರು 500 ಹಣ್ಣಿನ ಗಿಡಗಳನ್ನು ನೆಡಲಾಗಿದೆ. ತರಕಾರಿ ಹಾಗೂ ಸುಂದರವಾದ ಕೈದೋಟ ಗಳನ್ನು ಇಲ್ಲಿನ ಅಭ್ಯಾಸಿಗಳು ನೋಡಿಕೊಳ್ಳುತ್ತಾರೆ.





